# ಸಮ್ಮತಿಯ ಲೈಂಗಿಕ ಕ್ರಿಯೆ ಆರೋಪದಲ್ಲಿ 19 ವರ್ಷದ ಯುವಕನ ಬಂಧನ: ಹೈಕೋರ್ಟ್ ಕಳವಳ, ಬಿಡುಗಡೆಗೆ ಆದೇಶ

• ಉದಯವಾಹಿನಿ, ಬೆಂಗಳೂರು

ಇಬ್ಬರು ವಯಸ್ಕರ ನಡುವಿನ ಸಮ್ಮತಿ ಮತ್ತು ಪ್ರೀತಿಯ ಸಂಬಂಧವನ್ನು ಸಮಾಜ ಹಾಗೂ ಕುಟುಂಬ ಒಪ್ಪಲಿಲ್ಲ ಎಂಬ ಕಾರಣಕ್ಕೆ ಅಪರಾಧದ ಬಣ್ಣ ಬಳಿಯಲು ಸಾಧ್ಯವಿಲ್ಲ. ಸಮ್ಮತಿಯ ಪ್ರೀತಿಯನ್ನು ಅಪರಾಧೀಕರಣಗೊಳಿಸಲು ಕ್ರಿಮಿನಲ್ ಕಾನೂನನ್ನು ಅಸ್ತ್ರವಾಗಿ ಬಳಸಲು ಅವಕಾಶವಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ಅಲ್ಲದೆ, ಮದುವೆಯಾಗುವುದಾಗಿ ಭರವಸೆ ನೀಡಿ ಲೈಂಗಿಕ ಸಂಪರ್ಕ ಬೆಳೆಸಿದ ಆರೋಪದಡಿ ಜೈಲು ಶಿಕ್ಷೆಗೆ ಗುರಿಯಾಗಿದ್ದ 19 ವರ್ಷದ ಯುವಕನನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡುವಂತೆ ಕೋರ್ಟ್ ಆದೇಶಿಸಿದೆ. ಬೆಂಗಳೂರಿನ ಎಂ. ಧನುಷ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ಪೀಠ ಈ ಆದೇಶ ನೀಡಿದೆ.




ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಿ ಆದೇಶಿಸಿದೆ. ಪ್ರಕರಣದ ವಿಚಾರಣೆ ವೇಳೆ ದೂರುದಾರಳಾದ ಯುವತಿ ಸ್ವತಃ ನ್ಯಾಯಾಲಯದ ಮುಂದೆ ಹಾಜರಾಗಿ ನಮ್ಮ ನಡುವೆ ಇದ್ದದ್ದು ಸಮ್ಮತಿಯ ಸಂಬಂಧವೇ ಆಗಿದೆ. ನಾವಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದು, ಮದುವೆಯಾಗಲು ಸಿದ್ಧರಿದ್ದೇವೆ ಎಂದು ಕೋರ್ಟ್‌ಗೆ ತಿಳಿಸಿದಳು. ಈ ಅಂಶವನ್ನು ದಾಖಲಿಸಿಕೊಂಡ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೆ, ಕ್ರಿಮಿನಲ್ ಕಾನೂನು ಅತ್ಯಂತ ಗಂಭೀರವಾಗಿದೆ. ಕುಟುಂಬದ ಒಪ್ಪಿಗೆ ಇಲ್ಲ ಅಥವಾ ಸಮಾಜಕ್ಕೆ ಮುಜುಗರವಾಗುತ್ತದೆ ಎಂಬ ಕಾರಣಕ್ಕೆ ವಯಸ್ಕರ ನಡುವಿನ ಸಮ್ಮತಿಯ ಪ್ರೀತಿಯನ್ನು ಅಪರಾಧೀಕರಣಗೊಳಿಸಲು ಕ್ರಿಮಿನಲ್ ಕಾನೂನನ್ನು ಅಸ್ತ್ರವಾಗಿ ಬಳಸಲು ಬಿಡುವುದಿಲ್ಲ ಎಂದು ಪೀಠ ಹೇಳಿದೆ. ಮೇಲ್ನೋಟಕ್ಕೆ ಯುವಕನ ಕಡೆಯಿಂದ ಯಾವುದೇ ಬಲವಂತ, ಬೆದರಿಕೆ ಅಥವಾ ಲೈಂಗಿಕ ದೌರ್ಜನ್ಯ ನಡೆದಿರುವುದಕ್ಕೆ ಪುರಾವೆಗಳಿಲ್ಲ. ಇದು ಕೇವಲ ಇಬ್ಬರು ವಯಸ್ಕರ ನಡುವಿನ ಸಮ್ಮತಿಯ ಸಂಬಂಧವಾಗಿದೆ ಎಂದು ತಿಳಿಸಿದ ನ್ಯಾಯಪೀಠ, ಕೇವಲ 19 ವರ್ಷದ ಯುವಕನನ್ನು ಜೈಲಿನ ಗೋಡೆಗಳ ಮಧ್ಯೆ ಇಡುವುದು, ಆತನಿಗೆ ಹೊರ ಜಗತ್ತಿಗಿಂತಲೂ ಅಲ್ಲಿ ಹೆಚ್ಚಿನ ಅಪಾಯವನ್ನು ಉಂಟುಮಾಡಬಹುದು ಎಂದು ತಿಳಿಸಿದೆ.


ಜತೆಗೆ, ವಿಚಾರಣಾ ನ್ಯಾಯಾಲಯದ ಎಲ್ಲಾ ಮುಂದಿನ ನಡಾವಳಿಗಳಿಗೆ ತಡೆ ನೀಡಿದೆ. ಅಲ್ಲದೆ, ಜೈಲು ಅಧಿಕಾರಿಗಳಿಗೆ ಇ-ಮೇಲ್ ಮೂಲಕ ತಕ್ಷಣವೇ ಆದೇಶದ ಪ್ರತಿಯನ್ನು ರವಾನಿಸಿ, ಯುವಕನನ್ನು ಜೈಲಿನಿಂದ ತಕ್ಷಣ ಬಿಡುಗಡೆ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿದೆ.

## ಮನುವಾದಿ ವಿಜಯ್ ಪೆರಿಯಾರ್ ವಿಚಾರ ಅಧ್ಯಯನ ಮಾಡಲಿ: ನಟ ಚೇತನ್ ಅಹಿಂಸಾ

• ಉದಯವಾಹಿನಿ,ಬೆಂಗಳೂರು

'ಪೆರಿಯಾರ್ ಹೇಳಿದ ಎಲ್ಲವನ್ನೂ ನಾನು ಒಪ್ಪುವುದಿಲ್ಲ' ಎಂಬ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ನಟ ಚೇತನ್ ಅಹಿಂಸಾ, ಮೊದಲು ಪೆರಿಯಾರ್ ವಿಚಾರಗಳನ್ನು ಅಧ್ಯಯನ ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, 'ಪೆರಿಯಾರ್ ಹೇಳಿದ ಎಲ್ಲವನ್ನೂ ನಾನು ಒಪ್ಪುವುದಿಲ್ಲ, ದೇವರನ್ನು ನಂಬುತ್ತೇನೆ ಎಂದು ನೀವು ಹೇಳುತ್ತೀರಿ. ಚುನಾವಣಾ ಪ್ರಚಾರದಲ್ಲಿ ಪೆರಿಯಾರ್ ಅವರ ಚಿತ್ರ ಬಳಸಿರುವ ನೀವು, ಪೆರಿಯಾರ್ ಅವರ ಯಾವ ವಿಚಾರಗಳನ್ನು ಒಪ್ಪುತ್ತೀರಿ' ಎಂದು ಪ್ರಶ್ನಿಸಿದ್ದಾರೆ. ದೇವರನ್ನು ಪ್ರಶ್ನಿಸಲು ಆಳವಾದ ಚಿಂತನೆ ಮತ್ತು ಅರಿವು ಬೇಕು. ದೇವರನ್ನು ನಂಬಲು ಒಬ್ಬ ಮೂರ್ಖರಾದರೆ ಸಾಕು' ಎಂದು ಪೆರಿಯಾರ್ ಹೇಳುತ್ತಾರೆ.

## ನಾಡಪ್ರಭು ಕೆಂಪೇಗೌಡ ಸಮಾಧಿ ಸ್ಥಳವನ್ನು ಭವ್ಯ ಸ್ಮಾರಕವನ್ನಾಗಿ ನಿರ್ಮಿಸುವಂತೆ ಮನವಿ




• ಉದಯವಾಹಿನಿ, ಬೆಂಗಳೂರು

ವಿಶ್ವವಿಖ್ಯಾತ ಬೆಂಗಳೂರು ನಗರದ ಉಗಮ ಸ್ಥಾನ ದೊಡ್ಡಪೇಟೆ ಸರ್ಕಲ್ ಚಿಕ್ಕಪೇಟೆ ಹಾಗೂ ಕೆಂಪಾಪುರದ ಕೆಂಪೇಗೌಡ ಸಮಾಧಿ ಸ್ಥಳವನ್ನು ಭವ್ಯ ಸ್ಮಾರಕವನ್ನಾಗಿ ನಿರ್ಮಿಸುವಂತೆ ಚಿಲುಮೆ ರವಿಕುಮಾರ್ ಫೌಂಡೇಷನ್ ಸರ್ಕಾರಕ್ಕೆ ಮನವಿ ಮಾಡಿದೆ.

ನಾಡಪ್ರಭು ಕೆಂಪೇಗೌಡರ 517 ಜನ್ಮದಿನೋತ್ಸವದ ಹಿನ್ನೆಲೆಯಲ್ಲಿ ಈ ಆಗ್ರಹ ಮಾಡಿದ್ದು ಕ್ರಿ.ಶ. 1537 ರಲ್ಲಿ ಈಗಿನ ದೊಡ್ಡಪೇಟೆ ಸರ್ಕಲ್ ನಲ್ಲಿ 64 ಪೇಟೆಗಳೊಂದಿಗೆ ಬೆಂಗಳೂರು ನಿರ್ಮಿಸಲು ಪಣತೊಟ್ಟಿದ್ದರು ಎಂದಿದ್ದಾರೆ. ನೇಗಿಲು ಕಟ್ಟಿದ 4 ಜೋಡೆತ್ತುಗಳನ್ನು ನಾಲ್ಕು ದಿಕ್ಕುಗಳಿಗೂ ಬಿಟ್ಟು, ಬೆಂಗಳೂರು ನಗರದ ಆರಂಭದ ಸನ್ನಿವೇಶ ಪುನಸೃಷ್ಠಿ ಮೂಲಕ ಕೆಂಪೇಗೌಡ ಜನ್ಮೋತ್ಸವನ್ನು ಆಚರಿಸಿ ಈ ಮನವಿ ಮಾಡಿದ್ದಾರೆ. ನಾಡಪ್ರಭು ಕೆಂಪೇಗೌಡರು 500 ವರ್ಷಗಳ ಹಿಂದೆ 65 ವಿವಿಧ ನಾಣ್ಯಗಳನ್ನು ಚಲಾವಣೆಗೆ ತಂದು ಬೆಂಗಳೂರು ಮುಕ್ತ ವ್ಯಾಪಾರ ಕೇಂದ್ರವನ್ನಾಗಿ ಮಾಡಿದ್ದರು.

ಇಂತಹ ಮಹಾನ್ ವ್ಯಕ್ತಿಯ ಸಮಾಧಿ ಸ್ಥಳವಿಂದು ಶಿಥಿಲ ಅವಸ್ಥೆಗೆ ಬಂದಿದೆ. ಬೆಂಗಳೂರು ಉಗಮ ಸ್ಥಾನಗಳಲ್ಲಿ ನಾಡ ಹಬ್ಬಗಳಲ್ಲಿ ಮೊದಲು ಸ್ವಚ್ಚತಾ ಕಾರ್ಯಮಾಡುವಂತೆ ಈ ಸ್ಥಳಗಲ್ಲಿ ಸ್ವಚ್ಚತಾ ಅಭಿಯಾನ ಮಾಡಿ ಸಾವಿರಾರು ಜನರೊಂದಿಗೆ ಕೆಂಪೇಗೌಡ ಜನ್ಮೋತ್ಸವನ್ನು ಪ್ರತಿವರ್ಷ ಆಚರಿಸುತ್ತೇವೆ ಎಂದಿದ್ದಾರೆ. ಮುಂದಿನ ದಿನಗಳಲ್ಲಿ ದೂರದೃಷ್ಠಿಯ ಮಹಾನ್ ನಾಯಕ ಕೆಂಪೇಗೌಡರ ಸ್ಮಾರಕ ನಿರ್ಮಿಸುವವರೆಗೂ ಹೋರಾಟ ಮಾಡುತ್ತೇವೆ, ಎಂದು ತಿಳಿಸಿಸಿದ್ದಾರೆ.

ಇತಿಹಾಸಕಾರ ಧರ್ಮೇಂದ್ರಕುಮಾರ್ ಮಾತನಾಡಿ ಚಿಲುಮೆ ರವಿಕುಮಾರ್ ಫೌಂಡೇಶನ್ ಸದಸ್ಯರು ನಾಡಪ್ರಭು ಕೆಂಪೇಗೌಡರ ಜನ್ಮೋತ್ಸವವನ್ನು ಮನೆಯಲ್ಲಿ ಆಚರಿಸುವ ಹಬ್ಬಗಳಂತೆ ಆಚರಿಸುತ್ತಾರೆ. ನಾಡಪ್ರಭು ಕೆಂಪೇಗೌಡರ ಸಾಧನೆಗಳನ್ನು ಬೆಂಗಳೂರಿಗರು ಪ್ರತಿದಿನ ನೆನಪಿಸಿಕೊಳ್ಳಬೇಕು ಎಂದರು.

## ಕುಮಾರಸ್ವಾಮಿ ರಾಜಕೀಯ ಗಿಮಿಕ್ ಮಾಡುತ್ತಿದ್ದಾರೆ: ಪ್ರಿಯಾಂಕ್ ಖರ್ಗೆ




• ಉದಯವಾಹಿನಿ, ಬೆಂಗಳೂರು

ಸರ್ಕಾರದ ನೀತಿ, ಯೋಜನೆಗಳನ್ನು ಬೀದಿಯಲ್ಲಿ ನಿಂತುಕೊಂಡು ಮಾತನಾಡಬಾರದು ಎಂದು ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಹಾಲಿ ಕೇಂದ್ರ ಸಚಿವರಾಗಿ ಹೆಚ್ ಡಿ ಕುಮಾರಸ್ವಾಮಿಯವರಿಗೆ ತಿಳಿದಿಲ್ಲವೇ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ನಾನು ಖಾಲಿ ಕೂತಿದ್ದೇನೆ, ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮಾತುಕತೆಗೆ ಯಾವಾಗ ಕರೆಯುತ್ತಾರೋ ಆಗ ಬರುತ್ತೇನೆ ಎಂದು ಕುಮಾರಸ್ವಾಮಿ ಹೇಳಿದ್ದರು. ನಂತರ ವಿಧಾನ ಸೌಧಕ್ಕೆ ಬರಲು ಆಗುವುದಿಲ್ಲ, ನೀವೇ ರಾಮನಗರಕ್ಕೆ ಬನ್ನಿ ಎಂದರು.

ಸ್ಥಳ ದಿನಾಂಕ ಕುಮಾರಸ್ವಾಮಿಯವರೇ ಬದಲಾಯಿಸಿದರು, ಇದು ಸರಿನಾ, ಬೀದಿಯಲ್ಲಿ ನಿಂತು ಚರ್ಚೆ ಮಾಡಿದರೆ ಯೋಜನೆ, ನೀತಿ ನಿರೂಪಣೆಗಳು ಸರಿಯಾಗುತ್ತವೆಯೇ ಎಂದು ಕೇಳಿದರು.

ಸಮಸ್ಯೆಗಳನ್ನು ಆಹ್ವಾನಿಸಲು ಮುಖ್ಯಮಂತ್ರಿಗಳು ಸಿದ್ಧರಾಗಿದ್ದಾರೆ. ಕುಮಾರಸ್ವಾಮಿಯವರು ರಾಜಕೀಯ ನಾಟಕ ಮಾಡುತ್ತಿದ್ದಾರೆ, ರೈತರು, ಮಹಿಳೆಯರ, ಯುವಜನತೆ ಸಮಸ್ಯೆಯಿದ್ದರೆ ಬೀದಿಯಲ್ಲಿ ನಿಂತು ಚರ್ಚೆ ಮಾಡುತ್ತಾರೆಯೇ ಎಂದರು.

## ಸೂಕ್ತ ದಾಖಲೆ ಇಲ್ಲದ 3 ಕೋಟಿ ಹಣ ಜಪ್ತಿ, ಇಬ್ಬರು ಆರೋಪಿಗಳ ಬಂಧನ!

• ಉದಯವಾಹಿನಿ, ಬೆಂಗಳೂರು

ಶೆಡ್‌ವೊಂದರಲ್ಲಿ ದಾಖಲೆ ಇಲ್ಲದೆ ಸಂಗ್ರಹಿಸಲಾಗಿದ್ದ ಸುಮಾರು 3 ಕೋಟಿ ನಗದು ಪತ್ತೆಯಾಗಿದ್ದು, ಬೆಂಗಳೂರು ಪೊಲೀಸರು ಹಣವನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ. ಬ್ಯಾಂಕ್ ಸಾಲ ತೀರಿಸಲು ಹಣ ತಂದಿರುವುದಾಗಿ ಮಾಲೀಕರು ಹೇಳುತ್ತಿದ್ದು ಯಾವುದೇ ದಾಖಲೆಗಳನ್ನು ನೀಡದ ಹಿನ್ನೆಲೆ ಪ್ರಕರಣ ಅನುಮಾನಕ್ಕೆ ಕಾರಣವಾಗಿದೆ. ಕುರುಬರಹಳ್ಳಿಯಲ್ಲಿರುವ ಶೆಡ್‌ವೊಂದರಲ್ಲಿ ಈ ಹಣ ಪತ್ತೆಯಾಗಿದ್ದು, ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ತಾವರೆಕೆರೆ ನಿವಾಸಿ ನಾಗರಾಜ್ ಎಂಬುವರಿಗೆ ಈ ಹಣ ಸೇರಿದ್ದು ಎನ್ನಲಾಗಿದೆ. ನಾಗರಾಜ್ ಅವರ ಸ್ನೇಹಿತ ವೆಂಕಟೇಶ್ ಅವರಿಗೆ ಸೇರಿದ ಶೆಡ್‌ನಲ್ಲಿ ಹಣ ಸಂಗ್ರಹಿಸಲಾಗಿತ್ತು.

ಗುಪ್ತ ಮಾಹಿತಿ ಸಿಕ್ಕ ಕೂಡಲೇ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ವೇಳೆ ಸೂಕ್ತ ದಾಖಲೆ ನೀಡದ ಹಿನ್ನೆಲೆಯಲ್ಲಿ ನಗದನ್ನು ವಶಕ್ಕೆ ಪಡೆದುಕೊಂಡಿದ್ದು ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಪ್ರಕರಣದ ಕುರಿತು ಆದಾಯ ತೆರಿಗೆ ಇಲಾಖೆಗೆ ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಸಂಬಂಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

# ಕೆಂಪೇಗೌಡ ಜಯಂತಿ ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಆಚರಣೆ

## ಬೆಂಗಳೂರು ನಗರದ ಅಭಿವೃದ್ಧಿ ಮತ್ತು ಕೆಂಪೇಗೌಡರ ಸ್ಮರಣೆಗೆ ಸಂಬಂಧಿಸಿದಂತೆ ಹಲವು ಮುಖ್ಯ ಘೋಷಣೆ

• ಉದಯವಾಹಿನಿ, ಬೆಂಗಳೂರು


ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದು ಅದ್ದೂರಿಯಾಗಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಸಿಎಂ ಡಿ.ಕೆ ಶಿವಕುಮಾರ್ ಕೆಂಪೇಗೌಡರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ನಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೆಂಗಳೂರು ನಗರದ ಅಭಿವೃದ್ಧಿ ಮತ್ತು ಕೆಂಪೇಗೌಡರ ಸ್ಮರಣೆಗೆ ಸಂಬಂಧಿಸಿದಂತೆ ಹಲವು ಮುಖ್ಯ ಘೋಷಣೆಗಳನ್ನು ಮಾಡಿದರು. ಇದು ರಾಜ್ಯದ ಜನರಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.


ಇನ್ನು ಮುಂದೆ ಕೆಂಪೇಗೌಡ ಜಯಂತಿಯನ್ನು ವಿಧಾನಸೌಧ ಅಥವಾ ಫ್ರೀಡಂ ಪಾರ್ಕ್‌ಗೆ ಸೀಮಿತಗೊಳಿಸದೆ, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ವರ್ಷಕ್ಕೊಂದು ಕ್ಷೇತ್ರದ ವ್ಯಾಪ್ತಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಗುವುದು.

ಈ ವರ್ಷ ಯಶವಂತಪುರ ಕ್ಷೇತ್ರದ ಕೆಂಪೇಗೌಡ ಲೇಔಟ್‌ನಲ್ಲಿ ಜಯಂತಿ ಆಚರಣೆ ಪ್ರಾರಂಭವಾಗಿದ್ದು, ಮುಂದಿನ 28 ವರ್ಷಗಳ ಕಾಲ ಬೇರೆ ಬೇರೆ ಕ್ಷೇತ್ರಗಳಲ್ಲಿ ಈ ಕಾರ್ಯಕ್ರಮ ಮುಂದುವರಿಯಲಿದೆ.

ಜಿಬಿಎ ವತಿಯಿಂದ ಇದಕ್ಕೆ ಹಣಕಾಸಿನ ವ್ಯವಸ್ಥೆ ಮಾಡಲಾಗಿದ್ದು, ಇಡೀ ರಾಜ್ಯದಲ್ಲಿ ಕೆಂಪೇಗೌಡ ಜಯಂತಿಯನ್ನು ಆಚರಿಸಲು ಸರ್ಕಾರ ನಿರ್ಧರಿಸಿದೆ. ಕೆಂಪೇಗೌಡರ ಆಚಾರ-ವಿಚಾರಗಳನ್ನು ಅಳವಡಿಸಿಕೊಂಡು ಬೆಂಗಳೂರಿಗೆ ಹೊಸ ರೂಪ ನೀಡುವ ಚಿಂತನೆ ಇದೆ ಎಂದು ಹೇಳಿದರು. ಮಾಗಡಿಯಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಮಾಡಲು ಸೂಚನೆ ನೀಡಿರುವುದಾಗಿ ಸಿಎಂ ಹೇಳಿದರು. ಏರ್‌ಪೋರ್ಟ್‌ನಲ್ಲಿರುವ ಕೆಂಪೇಗೌಡರ ಪ್ರತಿಮೆಯನ್ನು ಇನ್ನಷ್ಟು ಸುಂದರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಬೆಂಗಳೂರಿನ ವಿವಿಧೆಡೆ ಕೆಂಪೇಗೌಡರ ಪುತ್ತಳಿಗಳನ್ನು ನಿರ್ಮಿಸುವುದಕ್ಕೂ ಯೋಜನೆ ರೂಪಿಸಲಾಗುತ್ತಿದೆ. ಈ ಬಗ್ಗೆ ಸಚಿವ ಕೃಷ್ಣ ಬೈರೇಗೌಡ ಗಮನ ಹರಿಸುವರು ಎಂದು ಮುಖ್ಯಮಂತ್ರಿ ತಿಳಿಸಿದರು.



1 ಕೆಂಪೇಗೌಡ ಜಯಂತಿ ಆಚರಣೆ ವಿಸ್ತರಣೆ
2 ಕೆಂಪೇಗೌಡರ ಹೆಸರಿನಲ್ಲಿ ಅಭಿವೃದ್ಧಿ ಕಾರ್ಯ
3 ರಾಜಧಾನಿಯನ್ನು ಸ್ಥಾಪಿಸಿದ ಮಹಾನ್ ವ್ಯಕ್ತಿ



### ಯೋಜನೆಗಳನ್ನು ಪೂರ್ಣಗೊಳಿಸುವಂತೆ ಪ್ರಯತ್ನ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೆಟ್ರೋ ವಿಸ್ತರಣೆ ಬಗ್ಗೆಯೂ ಮಾಹಿತಿ ನೀಡಿದರು. ಇನ್ನುಳಿದ ಎರಡು ವರ್ಷಗಳಲ್ಲಿ ಮೆಟ್ರೋ ವ್ಯವಸ್ಥೆಯನ್ನು ವಿಸ್ತರಿಸಲು ಸರ್ಕಾರ ಗಮನ ಹರಿಸುತ್ತಿದೆ. ಸುಮಾರು 500 ಕಿಲೋಮೀಟರ್ ಮೆಟ್ರೋ ಮಾರ್ಗಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಈ ಅವಧಿಯಲ್ಲೇ ಈ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಪ್ರಯತ್ನ ಮಾಡುವುದಾಗಿ ಹೇಳಿದರು.

> ಕೆಂಪೇಗೌಡರು ಬೆಂಗಳೂರಿನ ರಾಜಧಾನಿಯನ್ನು ಸ್ಥಾಪಿಸಿದ ಮಹಾನ್ ವ್ಯಕ್ತಿ. ಅವರ ಸೇವೆಯನ್ನು ಜನರು ಮರೆಯುವಂತಿಲ್ಲ. ಅವರ ಹೆಸರನ್ನು ಉಳಿಸುವುದಕ್ಕಾಗಿ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಯೋಜಿಸುತ್ತಿದೆ . ಸಿಎಂ ಡಿ.ಕೆ. ಶಿವಕುಮಾರ್

> ಮಾಗಡಿ ಬಳಿ ಸುಮಾರು 10 ಎಕರೆ ಪ್ರದೇಶದಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ. ಈಗಾಗಲೇ 5.5 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಉಳಿದ ಭೂಮಿಯ ಸ್ವಾಧೀನ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳ್ಳುವುದು ಎಂದು ತಿಳಿಸಿದರು.-ಸಿಎಂ ಡಿ.ಕೆ. ಶಿವಕುಮಾರ್

### ಬೆಂಗಳೂರಲ್ಲಿ 15 ಲಕ್ಷ ಸಸಿ ನೆಡುವ ಬೃಹತ್ ಅಭಿಯಾನ

ಕೆಂಪೇಗೌಡ ಜಯಂತಿ ಹಿನ್ನೆಲೆ ಬೆಂಗಳೂರಿನಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಬೃಹತ್ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಗಿಡ ನೆಟ್ಟು ವಿಶ್ವದಾಖಲೆ ಗುರಿಯೊಂದಿಗೆ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30ರ ಅಂಗವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ಅಭಿಯಾನ ಕೈಗೊಂಡಿದೆ.

# ಅಯೋಧ್ಯೆ ರಾಮ ಮಂದಿರದಲ್ಲಿ ಭಕ್ತರ ಕಾಣಿಕೆ ದುರ್ಬಳಕೆ ಆರೋಪ

## ಕೇಂದ್ರ ಸರ್ಕಾರ ನ್ಯಾಯಯುತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು: ಈಶ್ವರಪ್ಪ

• ಉದಯವಾಹಿನಿ, ಬೆಂಗಳೂರು

ಅಯೋಧ್ಯೆ ರಾಮ ಮಂದಿರದಲ್ಲಿ ಭಕ್ತರು ನೀಡಿದ ಕಾಣಿಕೆ ಹಣ ದುರ್ಬಳಕೆಯಾಗಿದೆ ಎಂಬ ಆರೋಪದ ಕುರಿತು ನ್ಯಾಯಸಮ್ಮತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದ್ದಾರೆ.

ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಆರೋಪಗಳು ರಾಮಭಕ್ತರನ್ನು ಬೆಚ್ಚಿಬೀಳುವಂತೆ ಮಾಡಿವೆ ಎಂದು ಹೇಳಿದರು. ಕೇಂದ್ರ ಸರ್ಕಾರ ಈ ವಿಷಯವನ್ನು ಲಘುವಾಗಿ




ಪರಿಗಣಿಸುತ್ತಿಲ್ಲ ಎಂಬ ನಂಬಿಕೆ ಇದೆ. ದೇಣಿಗೆ ಹಣವನ್ನು ದೀರ್ಘಕಾಲದಿಂದಲೇ ಅಕ್ರಮವಾಗಿ ದುರುಪಯೋಗಪಡಿಸಿಕೊಳ್ಳುವ ಸಂಚು ನಡೆದಿದೆ ಎಂಬ ವರದಿಗಳಿವೆ.

ಅಲ್ಲದೆ, ದೇವಸ್ಥಾನದ ಟ್ರಸ್ಟ್‌ನಿಂದಲೂ ಸ್ಪಷ್ಟ ವೈಫಲ್ಯ ಕಂಡುಬಂದಿದೆ ಎಂದು ಅವರು ಆರೋಪಿಸಿದರು. ಭಕ್ತರು ಅರ್ಪಿಸಿದ ಕಾಣಿಕೆ ಹಣವನ್ನು ದುರ್ಬಳಕೆ ಮಾಡಿದವರ ವಿರುದ್ಧ ಕೇಂದ್ರ ಸರ್ಕಾರ ನ್ಯಾಯಯುತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಈಶ್ವರಪ್ಪ ಒತ್ತಾಯಿಸಿದರು.

> ವಿವಾದಾತ್ಮಕ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕುರಿತು ಮಾತನಾಡಿದ ಈಶ್ವರಪ್ಪ, ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಕಡ್ಡಾಯ ಅನುಮತಿ ಪಡೆಯುವ ಮುನ್ನವೇ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ನಡೆಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ವಿರುದ್ಧ ಆರೋಪಿಸಿದರು. ಪರಿಸರ ಸಂಬಂಧಿತ ನಿಯಮಗಳನ್ನು ಪಾಲಿಸುವ ಬದಲು, ಮೊದಲು ಕೆಲಸ ಮಾಡಿ ನಂತರ ಕ್ಷಮೆ ಕೇಳುವ ಧೋರಣೆ ಅನುಸರಿಸಲಾಗುತ್ತಿದೆ ಎಂದು ಅವರು ಟೀಕಿಸಿದರು.- ಕೆ.ಎಸ್. ಈಶ್ವರಪ್ಪ

## ಹವಾಮಾನ ಬದಲಾವಣೆ ನಿರ್ವಹಣೆಗೆ ರಾಜ್ಯ ಸರ್ಕಾರ ಸಜ್ಜು: ಸಲಹೆಗಾರರಾಗಿ ನಿವೃತ್ತ ಅಧಿಕಾರಿ ಉಪೇಂದ್ರ ತ್ರಿಪಾಠಿ ನೇಮಕ..!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ತಲೆದೋರಿರುವ ಹವಾಮಾನ ವೈಪರೀತ್ಯ ಮತ್ತು ಪರಿಸರ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಪ್ರಮುಖ ಹೆಜ್ಜೆಯನ್ನಿಟ್ಟಿದೆ.

ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಉಪೇಂದ್ರ ತ್ರಿಪಾಠಿ ಅವರನ್ನು ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರ ಹವಾಮಾನ ಬದಲಾವಣೆ ಸಲಹೆಗಾರರನ್ನಾಗಿ ಹಾಗೂ ಕರ್ನಾಟಕದ ಹವಾಮಾನ ರಾಯಭಾರಿಯನ್ನಾಗಿ ಅಧಿಕೃತವಾಗಿ ನೇಮಕಗೊಳಿಸಿ ಆದೇಶ ಹೊರಡಿಸಲಾಗಿದೆ. 1980ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಉಪೇಂದ್ರ ತ್ರಿಪಾಠಿ ಅವರನ್ನು ಗೌರವಾಧಾರಿತ ಹುದ್ದೆಗೆ ನೇಮಕ ಮಾಡಲಾಗಿದ್ದು, ಅವರಿಗೆ ರಾಜ್ಯ ಸಚಿವರ ದರ್ಜೆ ಮತ್ತು ಸ್ಥಾನಮಾನ ನೀಡಲಾಗಿದೆ.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಉಪೇಂದ್ರ ತ್ರಿಪಾಠಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.

ಸಾರ್ವಜನಿಕ ಆಡಳಿತದಲ್ಲಿ ಅತ್ಯುತ್ತಮ ಸೇವೆಗಾಗಿ ಅವರಿಗೆ ಪ್ರಧಾನಮಂತ್ರಿಗಳ ಅತ್ಯುತ್ತಮ ಸಾರ್ವಜನಿಕ ಆಡಳಿತ ಪ್ರಶಸ್ತಿ ಲಭಿಸಿದೆ. 2017ರಿಂದ 2021ರವರೆಗೆ ಅವರು ಅಂತರರಾಷ್ಟ್ರೀಯ ಸೌರ ಒಕ್ಕೂಟ ಸಂಸ್ಥೆಯ ಮೊದಲ ಮಹಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಭಾರತದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಮೊದಲ




ಒಪ್ಪಂದ ಆಧಾರಿತ ಬಹುಪಕ್ಷೀಯ ಅಂತರರಾಷ್ಟ್ರೀಯ ಸಂಸ್ಥೆಯಾದ, ಅವರ ಅವಧಿಯಲ್ಲಿ ಗಮನಾರ್ಹ ಸಾಧನೆ ಮಾಡಿತ್ತು.

ಇದಕ್ಕೂ ಮುನ್ನ 2014ರಿಂದ 2016ರವರೆಗೆ ಭಾರತ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನ ಹಾಗೂ ಸುಸ್ಥಿರ ಅಭಿವೃದ್ಧಿ ಕ್ಷೇತ್ರದಲ್ಲಿ ಅವರ ಪರಿಣತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಈ ಮಹತ್ವದ ಜವಾಬ್ದಾರಿಯನ್ನು ನೀಡಿದೆ.


> ಇದರ ಜೊತೆಗೆ ರಾಷ್ಟ್ರೀಯ ಸೌರ ಇಂಧನ ಸಂಸ್ಥೆ ರಾಷ್ಟ್ರೀಯ ಗಾಳಿ ಇಂಧನ ಸಂಸ್ಥೆ ರಾಷ್ಟ್ರೀಯ ಜೈವಿಕ ಇಂಧನ ಸಂಸ್ಥೆ ಹಾಗೂ ಅಸೋಸಿಯೇಷನ್ ಆಫ್ ರಿನ್ಯೂಯಬಲ್ ಎನರ್ಜಿ ಏಜೆನ್ಸೀಸ್ ಸಂಸ್ಥೆಗಳ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುವ ಅನುಭವ ಹೊಂದಿದ್ದಾರೆ.

## ಎಂಇಐ ಸಂಸ್ಥೆಯಲ್ಲಿ ಕೆಂಪೇಗೌಡರ ಜಯಂತಿ ಆಚರಣೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮಹಾನಗರಿ ನಿರ್ಮಾಣದ ಹೆಮ್ಮೆಯ ಹರಿಕಾರರು, ಪ್ರಜಾವತ್ಸಲ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತ್ಯುತ್ಸವದ ಪ್ರಯುಕ್ತ ಇಂದು ಎಂ.ಇ.ಐ ಸಂಸ್ಥೆಯ ಆವರಣದಲ್ಲಿ ಅತ್ಯಂತ ಸಡಗರ ಹಾಗೂ ಗೌರವಪೂರ್ವಕವಾಗಿ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

ಎಂ.ಇ.ಐ ಸಂಸ್ಥೆಯ ಅಧ್ಯಕ್ಷ ಎಸ್. ಮನೋಹರ್ ರವರ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣ ಸಮಾರಂಭವು ಜರುಗಿತು. ಕಾರ್ಯಕ್ರಮದ ಆರಂಭದಲ್ಲಿ ಅಧ್ಯಕ್ಷಎಸ್. ಮನೋಹರ್ ಅವರು ನಾಡಪ್ರಭುಗಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.ಬಳಿಕ ಮಾತನಾಡಿದ ಅವರು, ''ಬೆಂಗಳೂರು ನಗರವು ಇಂದು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಹಾಗೂ ವಾಣಿಜ್ಯ ಹಬ್ ಆಗಿ ಬೆಳೆಯಲು




ಅಂದೇ ದೂರದೃಷ್ಟಿಯ ಯೋಜನೆಯನ್ನು ರೂಪಿಸಿದವರು ನಾಡಪ್ರಭುಗಳಾದ ಶ್ರೀ ಕೆಂಪೇಗೌಡರು. ಅವರ ವಿಶಿಷ್ಟ ಆಡಳಿತ ವೈಖರಿ, ಜಲಸಂರಕ್ಷಣೆಯ ಕೆರೆಗಳ ನಿರ್ಮಾಣ ಮತ್ತು ಸಮಾಜದ ಎಲ್ಲಾ ವರ್ಗದವರನ್ನು ಒಗ್ಗೂಡಿಸಿಕೊಂಡು ಹೋದ ಜನಪರ ಕಾಳಜಿ ನಮ್ಮ ಇಡೀ ಸಮಾಜಕ್ಕೆ ಇಂದಿಗೂ ಪ್ರೇರಣೆಯಾಗಿದೆ'' ಎಂದು ಸ್ಮರಿಸಿದರು. ಸಮಾರಂಭದಲ್ಲಿ ಎಂ.ಇ.ಐ ಸಂಸ್ಥೆಯ ಎಲ್ಲಾ ಹಿರಿಯ ಅಧಿಕಾರಿಗಳು, ಹಾಗೂ ನೌಕರಬಾಂಧವರು ಅತ್ಯಂತ ಶ್ರದ್ಧೆ ಮತ್ತು ಉತ್ಸಾಹದಿಂದ ಪಾಲ್ಗೊಂಡು, ನಾಡಪ್ರಭುಗಳ ಸಾಧನೆ ಹಾಗೂ ನಾಡಿಗೆ ಅವರು ನೀಡಿದ ಅಭೂತಪೂರ್ವ ಕೊಡುಗೆಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು.

## ಮಂತ್ರಿ ಸ್ವೇರ್‌ನಲ್ಲಿ ಮಾರ್ದಾ ಮೆಡ್ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ನಗರದ ಗಣ್ಯರು, ಪ್ರಮುಖ ಆರೋಗ್ಯ ಸೇವಾಕರ್ತರು ಹಾಗೂ ಮಾರ್ದಾಮೆಡ್ ಮತ್ತು ಮಂತ್ರಿ ಸ್ಕ್ವೇರ್ ಮಾಲ್ ತಂಡಗಳ ಸಮ್ಮುಖದಲ್ಲಿ ಈ ಕೇಂದ್ರವನ್ನು, ಸಂಸತ್ ಸದಸ್ಯ ಮತ್ತು ಖ್ಯಾತ ಹೃದ್ರೋಗ ತಜ್ಞರಾದ ಡಾ. ಸಿ.ಎನ್. ಮಂಜುನಾಥ್ ಅವರು ಉದ್ಘಾಟಿಸಿದರು.

ಮಾರ್ದಾಮೆಡ್, ಮಲ್ಲೇಶ್ವರದ ಮಂತ್ರಿ ಸ್ಕ್ವೇರ್ ಮಾಲ್‌ನಲ್ಲಿ ತನ್ನ ಪ್ರಮುಖ ಆರೋಗ್ಯ ಅನುಭವ ಕೇಂದ್ರವನ್ನು ಪ್ರಾರಂಭಿಸಿದೆ. ಇದು ಗಂಭೀರ ಆರೋಗ್ಯ ಪರಿಹಾರಗಳನ್ನು ಪರಿಚಿತ ದೈನಂದಿನ ವಾತಾವರಣಕ್ಕೆ ತರುವ ಒಂದು ದಿಟ್ಟ ಹೊಸ ಮಾದರಿಯಾಗಿದೆ. ಕಾಫಿ, ದಿನಸಿ ಅಥವಾ ವಾರಾಂತ್ಯದ ಚಲನಚಿತ್ರದಂತೆಯೇ, ಅದು ಸುಲಭವಾಗಿ ಲಭ್ಯವಾಗಬೇಕು.ಮಾಲ್‌ನ ಎರಡನೇ ಮಹಡಿಯಲ್ಲಿ ಸುಮಾರು 15,000 ಚದರ ಅಡಿ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿರುವ ಮಾರ್ದಾಮೆಡ್ ಹೆಕ್ಸ್, ಹೊರರೋಗಿಗಳ ಸಮಾಲೋಚನೆಗಳು, ಮಹಿಳಾ ಆರೋಗ್ಯ, ಮಕ್ಕಳ ಚಿಕಿತ್ಸೆ, ಒಳ ಔಷಧ, ಇಎನ್‌ಟಿ, ನೇತ್ರವಿಜ್ಞಾನ, ಮಾನಸಿಕ ಆರೋಗ್ಯ, ಫಿಸಿಯೋಥೆರಪಿ, ಕ್ರೀಡಾ ಔಷಧ, ದಂತಚಿಕಿತ್ಸೆ, ಸುಧಾರಿತ ರೋಗನಿರ್ಣಯ, ರೋಗಶಾಸ್ತ್ರ, ಔಷಧಾಲಯಗಳ ಜೊತೆಗೆ ಆರೋಗ್ಯಸ್ನೇಹಿ ಕೆಫೆ ಮತ್ತು ಆಯ್ದ ದಿನದ ಕಾರ್ಯವಿಧಾನಗಳಿಗಾಗಿ ಮಿನಿ ಆಪರೇಟಿಂಗ್ ಥಿಯೇಟರ್‌ಗಳನ್ನು ಸಂಯೋಜಿಸುತ್ತದೆ.

# ಎಸ್ ಐ ಆರ್ ತಂತ್ರಜ್ಞಾನ ಆಧಾರಿತ, ರಾಜ್ಯದ ಅಧಿಕಾರಿಗಳೇ ನಡೆಸಿದರೂ ಕಾಂಗ್ರೆಸ್ ಗೆ ಭಯ, ರಾಹುಲ್ ಗಾಂಧಿ ಕಾಮನ್ ಸೆನ್ಸ್ ಇಲ್ದೆ ಮಾತಾಡ್ತಾರೆ: ಪ್ರಹ್ಲಾದ್ ಜೋಷಿ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಹ್ಲಾದ್ ಜೋಷಿ ಅವರು, ಭಾರತದ ಚುನಾವಣಾ ಆಯೋಗ ಕೈಗೊಂಡಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ವಿರೋಧಿಸುತ್ತಿರುವ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಈ ಪ್ರಕ್ರಿಯೆಯಿಂದ ಈ ಹಿಂದೆ ಲಾಭ ಪಡೆದಿದ್ದೇವೆ ಎಂದು ಹೇಳಿಕೊಂಡಿದ್ದ ಕಾಂಗ್ರೆಸ್ ಈಗ ಅದನ್ನೇ ಏಕೆ ವಿರೋಧಿಸುತ್ತಿದೆ ಎಂದು ಅವರು ಪ್ರಶ್ನಿಸಿದರು. ಕಾಂಗ್ರೆಸ್‌ನವರು ಏಕೆ ಭಯಪಡುತ್ತಿದ್ದಾರೆ? ಇದೇ ಜನರು ಎಸ್‌ಐಆರ್‌ನಿಂದ ಕೇರಳದಲ್ಲಿ ನಾವು ಗೆದ್ದೆವು ಎಂದು ಹೇಳಿದ್ದರು. ತೆಲಂಗಾಣದಲ್ಲಿ ನೀವು ಗೆದ್ದಿರಿ ಆಗ ಯಾವುದೇ ಸಮಸ್ಯೆ ಇರಲಿಲ್ಲ. ಜಾರ್ಖಂಡ್‌ನಲ್ಲಿ ಗೆದ್ದಿರಿ ಆಗಲೂ ಸಮಸ್ಯೆ ಇರಲಿಲ್ಲ. ತಮಿಳುನಾಡಿನಲ್ಲಿ ಎಐಎಡಿಎಂಕೆಯೊಂದಿಗೆ ನಮ್ಮ ಮೈತ್ರಿ ಇತ್ತು ನಾವು ಗೆದ್ದೆವೇ ಅಲ್ಲಿ ಗೆದ್ದವರು ಯಾರು? ಕನಿಷ್ಠ ಸಾಮಾನ್ಯ ಜ್ಞಾನದಿಂದ ಮಾತನಾಡಬೇಕು. ಇಲ್ಲಿ ಕೂಡ ರಾಹುಲ್ ಗಾಂಧಿಯವರಂತೆ ಸಾಮಾನ್ಯ ಜ್ಞಾನವಿಲ್ಲದೆ ಮಾತನಾಡಿದರೆ ನಾವು ಏನು ಮಾಡಬಹುದು ಎಂದು ಕೇಳಿದರು.

ಇದಕ್ಕೂ ಮುನ್ನ ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಚುನಾವಣಾ ಆಯೋಗದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೆ ಪ್ರತಿಯಾಗಿ ರಾಜ್ಯಾದ್ಯಂತ ಬೃಹತ್ ಜನಜಾಗೃತಿ ಅಭಿಯಾನ ಆರಂಭಿಸಿರುವುದಾಗಿ ಘೋಷಿಸಿದರು.

ಈ ಪ್ರಕ್ರಿಯೆಯನ್ನು ಬಳಸಿಕೊಂಡು ಬಿಜೆಪಿ ಬಡವರ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರ ಮತದಾನದ ಹಕ್ಕನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು. ರಾಜ್ಯದ ಬಹುತೇಕ ಜಿಲ್ಲೆಗಳು ಮತ್ತು ತಾಲ್ಲೂಕುಗಳಿಗೆ ವೀಕ್ಷಕರನ್ನು ನೇಮಿಸಲಾಗಿದ್ದು, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಯಾವುದೇ ನೈಜ ಭಾರತೀಯ ನಾಗರಿಕ ಮತದಾನದ ಹಕ್ಕು ಕಳೆದುಕೊಳ್ಳಬಾರದು ಎಂಬುದು ಕಾಂಗ್ರೆಸ್‌ನ ಉದ್ದೇಶ ಎಂದು ಹರಿಪ್ರಸಾದ್ ಆರೋಪಿಸಿದರು.ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜನಜಾಗೃತಿ ಕಾರ್ಯಕ್ರಮ ಆರಂಭಿಸಿದೆ. ಸಮಯಾವಕಾಶ ಕಡಿಮೆ ಇರುವುದರಿಂದ ಬಹುತೇಕ ಎಲ್ಲಾ ಜಿಲ್ಲೆಗಳು ಮತ್ತು ತಾಲ್ಲೂಕುಗಳಿಗೆ ವೀಕ್ಷಕರನ್ನು ನಿಯೋಜಿಸಲಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡವರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.




> ಬಿಜೆಪಿ ಬಹುಸಂಖ್ಯಾತ ಬಡ ಜನರ ಮತದಾನದ ಹಕ್ಕು ಕಸಿಯಲು ಪ್ರಯತ್ನಿಸುತ್ತಿದೆ ಎಂದು ಪುನರುಚ್ಚರಿಸಿದ ಬಿ ಕೆ ಹರಿಪ್ರಸಾದ್, ಜೂನ್ 30ರಿಂದ ಜುಲೈ 29ರೊಳಗೆ ಎಲ್ಲಾ ಅರ್ಹ ಮತದಾರರು ತಮ್ಮ ಗಣತಿ ನಮೂನೆ ಭರ್ತಿ ಮಾಡಿ, ಬೂತ್ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುವಂತೆ ಮನವಿ ಮಾಡಿದರು.-ಬಿ.ಕೆ. ಹರಿಪ್ರಸಾದ್

ಮತದಾರರ ಪಟ್ಟಿ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್ ದ್ವಂದ್ವ ನಿಲುವು ಅನುಸರಿಸುತ್ತಿದ್ದು, ರಾಜಕೀಯ ಕಾರಣಗಳಿಗಾಗಿ ಆಧಾರರಹಿತ ಆಕ್ಷೇಪಣೆಗಳನ್ನು ಎತ್ತುತ್ತಿದೆ ಎಂದು ಆರೋಪಿಸಿದರು.
-ಕೇಂದ್ರ ಸಚಿವ ಜೋಷಿ

### ನಾಗರಿಕ ಮತದಾನದ ಹಕ್ಕು ಕಳೆದುಕೊಳ್ಳಬಾರದು

# ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೆ ಮತ್ತೆ ಬಾಂಬ್ ಬೆದರಿಕೆ: ಸೂಕ್ತ ತನಿಖೆಗೆ ಗೃಹ ಸಚಿವರಿಗೆ ವಕೀಲರ ಒತ್ತಾಯ

• ಉದಯವಾಹಿನಿ, ಚಾಮರಾಜನಗರ

ಜಿಲ್ಲಾ ನ್ಯಾಯಾಲಯಕ್ಕೆ ಮತ್ತೊಮ್ಮೆ ಕಿಡಿಗೇಡಿಗಳು ಬಾಂಬ್ ಬೆದರಿಕೆ ಇ-ಮೇಲ್ ಸಂದೇಶವನ್ನು ಕಳುಹಿಸಿದ್ದು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಚಾಮರಾಜನಗರ ಜಿಲ್ಲಾ ಸತ್ರ ಮತ್ತು ಪ್ರಧಾನ ನ್ಯಾಯಾಲಯಕ್ಕೆ ಡಾರ್ಕ್ ವೆಬ್ ಮೂಲಕ ಇ-ಮೇಲ್ ಕಳುಹಿಸಲಾಗಿದ್ದು, ಅದರಲ್ಲಿ 'ತಮಿಳುನಾಡು ಮಾಜಿ ಸಿಎಂ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಪ್ರವಾದಿ ಮಹಮ್ಮದ್ ಗೆ ಅಪಮಾನ ಮಾಡಿದ್ದು, ಚಾಮರಾಜನಗರ ಕೋರ್ಟ್ ರಸ್ತೆಯಲ್ಲಿ 3 ಸಿಲಿಕಾನ್ ಬಾಂಬ್, ನ್ಯಾಯಾಲಯದ ರೆಕಾರ್ಡ್ ರೂಂ ನಲ್ಲಿ 3 ಹಾಗೂ ಇ-ಸೇವಾ ಕೇಂದ್ರದಲ್ಲಿ 2 ಬಾಂಬ್ ಇಡಲಾಗಿದೆ. ಶನಿವಾರ



ಉದಯವಾಹಿನಿ ಚಿತ್ರ

ಮಧ್ಯಾಹ್ನ 2:25ಕ್ಕೆ ಸ್ಫೋಟಗೊಳ್ಳಲಿವೆ' ಎಂದು ಇ-ಮೇಲ್ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇ-ಮೇಲ್ ಬಂದ ಮಾಹಿತಿ ಅರಿತು, ನ್ಯಾಯಾಲಯದ ಸಿಬ್ಬಂದಿಗಳು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದರು. ಈ ವೇಳೆ ಎಲ್ಲರನ್ನೂ ನ್ಯಾಯಾಲಯದಿಂದ ಹೊರಗೆ ಕಳುಹಿಸಿ ಜಿಲ್ಲಾ ಪೊಲೀಸರು ಬಾಂಬ್ ನಿಷ್ಕ್ರಿಯ ದಳ ಮತ್ತು ಡಾಗ್ ಸ್ಕ್ವಾಡ್‌ಗಳ ಮೂಲಕ ಪರಿಶೀಲನೆ ನಡೆಸಿದ್ದಾರೆ.

**ಎರಡು ದಿನಗಳ ಹಿಂದೆಯೂ ಬಾಂಬ್ ಇಟ್ಟಿರುವ ಬೆದರಿಕೆ:** ಕಳೆದ ಎರಡು ದಿನಗಳ ಹಿಂದೆಯೂ ಕೂಡ ಇದೇ ನ್ಯಾಯಾಲಯಕ್ಕೆ ಅಜ್ಮಲ್ ಕಸಬ್ ಎಂಬಾತನ ಹೆಸರಿನಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇಂದು ಮತ್ತೊಮ್ಮೆ ಅದೇ ರೀತಿಯ ಬೆದರಿಕೆಯ ಸಂದೇಶ ಬಂದಿದೆ.

**ಕೋರ್ಟ್ ಸಮಯ ವ್ಯರ್ಥ:** ಈ ಕುರಿತು ವಕೀಲ ಪ್ರಸನ್ನಕುಮಾರ್ ಮಾತನಾಡಿ, ಕೆಲ ಕಿಡಿಗೇಡಿಗಳು ನ್ಯಾಯಾಂಗ ವ್ಯವಸ್ಥೆಯನ್ನೇ ಗುರಿಯಾಗಿಸಿ ಬಾಂಬ್ ಬೆದರಿಕೆ ಕಳುಹಿಸುತ್ತಿದ್ದಾರೆ.

ಎರಡು ದಿನದ ಅಂತರದಲ್ಲಿ ಎರಡನೇ ಬಾರಿ ಇ-ಮೇಲ್ ಸಂದೇಶ ಬಂದಿದ್ದು ನ್ಯಾಯಾಧೀಶರು, ವಕೀಲರು, ಕಕ್ಷಿದಾರರು ಆತಂಕದಲ್ಲಿದ್ದಾರೆ.

ಕಲಾಪಗಳು ನಡೆಯದಿರುವುದರಿಂದ ಸಮಯ ವ್ಯರ್ಥವಾಗಿದೆ. ಕಕ್ಷಿದಾರರು ದೂರದ ಊರುಗಳಿಂದ ಬಂದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

## ರಸ್ತೆ ದಾಟುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿ, ಚಿರತೆ ಸ್ಥಳದಲ್ಲೇ ಸಾವು

• ಉದಯವಾಹಿನಿ, ಮೈಸೂರು

ಆಹಾರ ಅರಸಿ ಹೆದ್ದಾರಿ ರಸ್ತೆ ದಾಟುತ್ತಿದ್ದ ಚಿರತೆಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಅರಬ್ಬಿತಿಟ್ಟು ವನ್ಯಧಾಮದ ಬಳಿಯ ಹುಣಸೂರು - ಮೈಸೂರು ಹೆದ್ದಾರಿಯಲ್ಲಿ ನಡೆದಿದೆ.

ಅರಬ್ಬಿತಿಟ್ಟು ಸಂರಕ್ಷಿತ ಅರಣ್ಯ ಪ್ರದೇಶದಿಂದ ಆಹಾರ ಅರಸಿ ಹೆದ್ದಾರಿ ಎದುರಿನ ರಕ್ಷಿತಾರಣ್ಯದ ಕಡೆಗೆ ಚಿರತೆ ರಸ್ತೆ ದಾಟುತ್ತಿತ್ತು. ಈ ವೇಳೆ ಹುಣಸೂರು ಕಡೆಯಿಂದ ಮೈಸೂರಿಗೆ ತೆರಳುತ್ತಿದ್ದ ಅಪರಿಚಿತ ವಾಹನವೊಂದು ಅದಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಚಿರತೆ ಸ್ಥಳದಲ್ಲೇ ಮೃತಪಟ್ಟಿದೆ. ಮಾಹಿತಿ ಮೇರೆಗೆ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಡಿಆರ್‌ಎಫ್‌ಒ ರಮಣಗೌಡ ಹಾಗೂ ಸಿಬ್ಬಂದಿ ದೌಡಾಯಿಸಿ ಪರಿಶೀಲಿಸಿ, ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದು ಬಿಳಿಕೆರೆ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ಚಿರತೆಯ ಮರಣೋತ್ತರ ಪರೀಕ್ಷೆ ನಂತರ, ಅರಣ್ಯಾಧಿಕಾರಿಗಳ ಸಮ್ಮುಖದಲ್ಲಿ ಅದರ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಜಿಂಕೆಯ ರಕ್ಷಣೆ:** ಅರಣ್ಯದಿಂದ ತಪ್ಪಿಸಿಕೊಂಡು ಬಂದ ಜಿಂಕೆಯೊಂದು ಬೀದಿ ನಾಯಿಗಳ ದಾಳಿಗೆ ಒಳಗಾದ ಘಟನೆ ನಂಜನಗೂಡು ತಾಲ್ಲೂಕಿನ ಹೆಡತಲೆ ಗ್ರಾಮದಲ್ಲಿ ನಡೆದಿದೆ. ಯುವಕರ ತಂಡ ತಕ್ಷಣ ಸ್ಪಂದಿಸಿ ಜಿಂಕೆಯನ್ನು ರಕ್ಷಿಸಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಹೆಡತಲೆ ಗ್ರಾಮದ ಹೊರವಲಯದ ಹೊಲದ ಕಡೆಗೆ ಕಾಡಿನಿಂದ ಜಿಂಕೆಯೊಂದು ನಾಡಿಗೆ ನುಗ್ಗಿದೆ. ಜಿಂಕೆಯನ್ನು ಕಂಡ ಬೀದಿ ನಾಯಿಗಳ ಗುಂಪು ಹಿಂಬಾಲಿಸಿ ದಾಳಿ ನಡೆಸಿದೆ. ನಾಯಿಗಳು ಜಿಂಕೆಯ ಕಣ್ಣು, ತಲೆ, ಹೊಟ್ಟೆ, ಕುತ್ತಿಗೆ ಭಾಗವನ್ನು ಕಚ್ಚಿರುವ ಗುರುತುಗಳು ಸ್ಪಷ್ಟವಾಗಿ ಕಂಡುಬಂದಿವೆ.

# ಬಹುದೊಡ್ಡ ಮಾದರಿ ನಾಡು ಪ್ರಭು ಕೆಂಪೇಗೌಡ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಅಂತಃಕರಣದ ನಾಯಕತ್ವಕ್ಕೆ ಬಹುದೊಡ್ಡ ಮಾದರಿಯಂತಿರುವ ನಾಡು ಪ್ರಭು ಕೆಂಪೇಗೌಡರಿಗೆ ಗೌರವ ಕೊಡುವುದು ಸಮುದಾಯದ ಆದ್ಯತೆಯಾಗಬೇಕಿದೆ.

ಪರಿಹಾರವಿಲ್ಲದ ಸಮಸ್ಯೆ ಯಾವುದೂ ಇರಲು ಸಾಧ್ಯವಿಲ್ಲ. ಸರಕಾರಿ ಕಾರ್ಯಕ್ರಮಕ್ಕೆ ತೊಂದರೆ ಕೊಡುವುದು ಶೋಭ ತರುವುದಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಬೇಸರ ವ್ಯಕ್ತಪಡಿಸಿದರು.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲ್ಲೂಕು ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಾಡೋಣ ಸ್ವಾಮೀಜಿ ಮನವಿ ನಂತರ ಕಾರ್ಯಕ್ರಮ ನಡೆಯಿತು.

ಇತಿಹಾಸ ಜೀವಂತವಾಗಿ ಇರುವಷ್ಟೂ ಕಾಲ ನಾಡಪ್ರಭು ಕೆಂಪೇಗೌಡರ ಹೆಸರು ಚಿರಸ್ಥಾಯಿಯಾಗಿ ಇರಲಿದೆ. ಕೆಂಪೇಗೌಡರು ನಡೆದಾಡಿದ ನಾಡಿನ ಎಲ್ಲಾ ಸ್ಥಳಗಳಲ್ಲಿಯೂ ಕೂಡ ವಿಜೃಂಭಣೆಯಿಂದ ಜಯಂತಿ ಕಾರ್ಯಕ್ರಮ ನಡೆಯುತ್ತಿದೆ ಎಂದ ಅವರು ನಗರದ ಈ ಕಾರ್ಯಕ್ರಮಕ್ಕೆ 15 ದಿನಗಳ ತಯಾರಿಯಿದ್ದು ಬೆಳಿಗ್ಗೆ 6ಗಂಟೆಯಿಂದಯೇ ಹತ್ತಾರು ಇಲಾಖೆಗಳು, ಸಮುದಾಯದ ಮುಖಂಡರು, ಸಂಘಟನೆಗಳ ನಾಯಕರು ಸಿದ್ಧತೆ ಮಾಡಿಕೊಂಡಿದ್ದು ವೈಭವದಿಂದ ಮೆರವಣಿಗೆ ನಡೆದಿದೆ.517ನೇ ಜಯಂತಿ ಇದು. ಇಷ್ಟು ವರ್ಷ ಆದ್ರೂ ಯಾಕೆ ಜಯಂತಿ ಆಚರಣೆ ಮಾಡುತ್ತಿದ್ದಾರೆ ಎಂಬ ಸತ್ಯ ತಿಳಿಯಬೇಕು. ಅನಗತ್ಯವಾಗಿ



ಉದಯವಾಹಿನಿ ಚಿತ್ರ

ಗಲಾಟೆ ಗದ್ದಲದ ಮೂಲಕ ಕಾರ್ಯಕ್ರಮವನ್ನು ಯಾರೂ ಹಾಳು ಮಾಡಬಾರದು. ಕೆಂಪೇಗೌಡರಿಗೆ ಕೊಡುವ ಗೌರವವೇ ಜಿಲ್ಲೆಗೆ ಕೊಡುವ ಗೌರವ ವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರಿ ಶಾಲೆಗಳ 20 ಮಕ್ಕಳಿಗೆ, ಕೃಷಿ ಕ್ಷೇತ್ರ, ಸಮಾಜದ ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವ ಸಲ್ಲಿಸ ಬೇಕಿದೆ. ಯಾವುದೋ ನೆಪವಿಟ್ಟುಕೊಂಡು ಕಾರ್ಯಕ್ರಮದ ಘನತೆ ಗೌರವಕ್ಕೆ ಕುಂದು ತರಬಾರದು ಎಂದು ಮನವಿ ಮಾಡಿದ ಅವರು ಗಾಂಧೀಜಿಯಂತಹ ದಿಟ್ಟ ನಾಯಕತ್ವವೇ ದೇಶದ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡಿತು. ಅಂತೆಯೇ ಕೆಂಪೇಗೌಡರ ಜಯಂತಿ ಕೂಡ ಸಮುದಾಯವನ್ನು ಬೆಸೆಯುವ ಕೆಲಸ ಮಾಡಬೇಕು ಎಂದರು.ರೈತಕುಲ,ಬವರಿನ ಮಹಿಮೆ, ಕೃಷಿ ಸಂಸ್ಕೃತಿಗೆ ಕುವೆಂಪು ಗೌರವ ತಂದುಕೊಟ್ಟರು. ಅಂತೆಯೇ ನಾಡಪ್ರಭು ಕೆಂಪೇಗೌಡರು ಕೂಡ 512 ವರ್ಷಗಳಿಗೂ ಮೊದಲು ಬೆಂಗಳೂರು ನಗರ ಕಲ್ಪನೆಯ ಜತೆಗೆ ಮಾರುಕಟ್ಟೆ ನಿರ್ಮಾಣ ಮಾಡಿದರು. ರೈತನಿಗೆ ಭದ್ರತೆ ನೀಡಿದರು. ಅವರ ಈ ಸಂಕಲ್ಪ ಮೂಲೆ ಮೂಲೆಗಳಲ್ಲಿ ಪರಿಹರಿಸಬೇಕು ಎಂದು ಸಮುದಾಯದಲ್ಲಿ ಮನವಿ ಮಾಡುತ್ತೇನೆ.

ಸರಕಾರ 37ಮಹನೀಯರ ಜಯಂತಿ ಆಚರಣೆ ಮಾಡುತ್ತಿದೆ. ಈ ಎಲ್ಲಾ ಮಹನೀಯರ ಜೀವನ ಸಾಧನೆ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ ಆಗ ಮಾತ್ರ ಜಯಂತಿಗಳಿಗೆ ಸಾರ್ಥಕತೆ ಬರಲಿದೆ.

ಎಲ್ಲರಿಗೂ ಮೆರವಣಿಗೆಯಲ್ಲಿ ಭಾಗಿಯಾಗಲು ಅವಕಾಶ ನೀಡಿದ ಪರಿಣಾಮವೇ ವೇದಿಕೆ ಕಾರ್ಯಕ್ರಮ ಗಂಟೆಗಳ ತಡವಾಗಿ ಆರಂಭಿಸಲಾಗಿದೆ ಇದನ್ನು ಅರಿಯಬೇಕು ಎಂದರು. ಆದರೆ ಜನಾನುರಾಗಿ ಪ್ರಭುವಾಗಿದ್ದ ಕೆಂಪೇಗೌಡ ಅರಮನೆ ಕಟ್ಟಲಿಲ್ಲ. ಬದಲಿಗೆ ಕೆರೆಬಾವಿ ಗೋಕಟ್ಟೆ, ಪೇಟೆಗಳನ್ನು ನಿರ್ಮಾಣ ಮಾಡಿದರು. ಈ ದೂರದೃಷ್ಟಿ ಇಂದಿನ ಆಡಳಿತಕ್ಕೆ, ಸರ್ಕಾರಕ್ಕೆ ಮಾದರಿ ಎಂದರು.

### ಕೆಂಪೇಗೌಡರ ಆಶೀರ್ವಾದ ನಮ್ಮೆಲ್ಲರ ಮೇಲಿರಲಿ

**ಕೆಂಪೇಗೌಡರು ಕಟ್ಟಿದ ಬೆಂಗಳೂರಿನ ಹೆಗ್ಗಳಿಕೆ ಹೇಗಿದೆ ಎಂದರೆ ದೇಶದ ಶೇ.35ರಷ್ಟು ಆದಾಯ ಬೆಂಗಳೂರು ಒಂದರಿಂದಲೇ ಉತ್ಪತ್ತಿ ಆಗುತ್ತಿದೆ.ಇಂತಹ ನಾಡಪ್ರಭು ಕೆಂಪೇಗೌಡರ ಆಶೀರ್ವಾದ ನಮ್ಮೆಲ್ಲರ 15 ಮತ್ತು 16ನೇ ಶತಮಾನ ಶ್ರೀಕೃಷ್ಣದೇವರಾಯರ ಆಡಳಿತಕ್ಕೆ ಕೆಂಪೇಗೌಡರ ಆಡಳಿತದ ಸ್ಫೂರ್ತಿಯಯೇ ಶ್ರೀಕೃಷ್ಣದೇವರಾಯ ಆಗಿದ್ದರು. 217 ವರ್ಷಗಳು ಕಳೆದರೂ ಶ್ರೀಕೃಷ್ಣದೇವರಾಯರ ಆಡಳಿತ ದಕ್ಷಿಣ ಭಾರತಕ್ಕೆ ಸ್ಫೂರ್ತಿಯಾಗಿದೆ ಎಂದರೆ ಕೃಷ್ಣದೇವರಾಯರ ಜನಪರ ಆಡಳಿತ, ಆಡಳಿತದಲ್ಲಿನ ಪ್ರಾಮಾಣಿಕತೆ ಸಾಕ್ಷಿ ಎನ್ನುತ್ತಾ ಮಾತು ಮುಗಿಸಿದರು.**

### ಮಾತನಾಡಲು ಅವಕಾಶ ನೀಡಬೇಡಿ

**ಶಾಸಕರು ಭಾಷಣ ಪ್ರಾರಂಭಿಸುತ್ತಿದ್ದಂತೆ ಗದ್ದಲ ಜೋರಾಯಿತು. ಹುಚ್ಚ, ಹುಚ್ಚ, ಹುಚ್ಚ ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು. ಮಾತು ನಿಲ್ಲಿಸೋ ಎಂಬ ಏಕವಚನ ಪ್ರಯೋಗಗಳೂ ಜೋರಾಗಿಯೇ ಕೇಳಿಬಂದವು. ವೇದಿಕೆಯಿಂದ ಕೆಳಗಿಸಿ, ಅವರಿಗೆ ಮಾತನಾಡಲು ಅವಕಾಶ ನೀಡಬೇಡಿ ಎಂಬ ಮಾತುಗಳೂ ಮೊಳಗಿದವು.**

**ಯಾವುದಕ್ಕೂ ಸೊಪ್ಪು ಹಾಕದೆ ನಿರುಮ್ಮಳವಾಗಿ ಮಾತನಾಡಿದ ಶಾಸಕ ಪ್ರದೀಪ್ ಈಶ್ವರ್ ಭಾಷಣದ ಕೊನೆಗೆ ಜೈಕೆಂಪೇಗೌಡ, ಜೈ ಅಂಬೇಡ್ಕರ್, ಜೈವಾಲ್ಮೀಕಿ ಎನ್ನುತ್ತಾ ತಮ್ಮ ಎಂದಿನ ಶೈಲಿಯಲ್ಲಿ ಭಾಷಣ ಮುಗಿಸಿದರು. ಇದೇ ವೇಳೆ, ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.**

## ಮತದಾರರ ನಿರೀಕ್ಷೆ ಹುಸಿಗೊಳಿಸಿದ ಶಾಸಕ ಗಣೇಶ್ ಪ್ರಸಾದ್ : ನಿರಂಜನ್ ವಾಗ್ದಾಳಿ

• ಉದಯವಾಹಿನಿ, ಗುಂಡ್ಲುಪೇಟೆ

ಕ್ಷೇತ್ರದ ಮತದಾರರ ನಿರೀಕ್ಷೆ ಸಫಲಗೊಳಿಸುವಲ್ಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ವಿಫಲರಾಗಿದ್ದು ಇವರ ದುರಾಡಳಿತದಿಂದ ತಾಲ್ಲೂಕಿನ ರೈತಾಪಿ ವರ್ಗ ಜನಸಾಮಾನ್ಯರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮಾಜಿ ಶಾಸಕ ಬಿಜೆಪಿ ಚಾಮರಾಜನಗರ ಜಿಲಾಧ್ಯಕ್ಷ ನಿರಂಜನ್ ಕುಮಾರ್ ವಾಗ್ದಾಳಿ ನಡೆಸಿದರು.

ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪಂಚ ಗ್ಯಾರಂಟಿ ಘೋಷಣೆಯೊಂದಿಗೆ ಶಾಸಕರಾಗಿ ಆಯ್ಕೆಯಾದ ಬಳಿಕ ರೈತರ ಸಂಕಷ್ಟ ಪರಿಹಾರಕ್ಕೆ ಮುಂದಾಗದ ಗಣೇಶ್ ಪ್ರಸಾದ್



ಉದಯವಾಹಿನಿ ಚಿತ್ರ

ಕೆರೆಗಳಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಯ ಕಡೆ ಗಮನಹರಿಸಲಿಲ್ಲ, ಕೃಷಿ ಚಟುವಟಿಕೆಗೆ ತೀವ್ರ ಬರ ಸವಾಲಾದ ಹಿನ್ನೆಲೆ ಚಳುವಳಿಗಿಳಿದ ರೈತರು ನಿರಂತರ 45 ದಿನಗಳ ಹೋರಾಟ ನಡೆಸಿದ್ದರು ಅಲ್ಲದೆ ಬಿಜೆಪಿಯ ರಾಜ್ಯ ವಿಪಕ್ಷ ನಾಯಕ ಆರ್ ಅಶೋಕ್ ಮೈಸೂರು ಸಂಸದ ಯಧುವೀರ್ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ ಅವರೊಟ್ಟಿಗೆ ಕಲ್ಲುಕಟ್ಟೆ ಕೆರೆಯಿಂದ ತಹಶೀಲ್ದಾರ್ ಕಚೇರಿ ತನಕ ಪಾದಯಾತ್ರೆ ನಡೆಸಲಾಗಿತ್ತು.

ಇಷ್ಟೆಲ್ಲಾ ಹೋರಾಟದ ಬಳಿಕವೂ ಚಳುವಳಿ ಮುಂದುವರಿಸಿದ್ದ ರೈತರಲ್ಲಿ ಎರಡು ತಿಂಗಳುಗಳ ಕಾಲಾವಕಾಶ ಕೋರಿದ್ದ ಶಾಸಕರು ಮಾತಿಗೆ ತಪ್ಪಿದ್ದಲ್ಲದೆ ಜವಾಬ್ದಾರಿರಹಿತರಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಪತ್ರಿಕಾಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಮಂಡಲ ಪ್ರಧಾನ ಕಾರ್ಯದರ್ಶಿ ಸುನಿಲ್ ಮೂಡ್ಲು, ಮಹೇಂದ್ರ, ಡಿ.ಮಾದಪ್ಪ, ಎಲ್.ಸುರೇಶ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಡಾ.ನವೀನ್ ಮೌರ್ಯ, ರೇವಣ್ಣ ಕಬ್ಬಹಳ್ಳಿ, ಪುರಸಭಾ ಮಾಜಿ ಸದಸ್ಯ ನಾಗೇಶ್, ಮಂಜು ಶಿವಪುರ, ಶಿಂಡನಪುರ ಮಂಜು, ಗೋವಿಂದ್ ನಾಯಕ್ ತೆರಕಣಾಂಬಿ, ಕಣ್ಣೇಗಾಲ ನಾಗುಸ್ವಾಮಿ, ನಾಗೇಂದ್ರ ದೇವರಹಳ್ಳಿ ಸೇರಿದಂತೆ ಹಲವರು ಹಾಜರಿದ್ದರು.

## ಮೈಸೂರಿನಲ್ಲಿ ಅದ್ದೂರಿ ಕೆಂಪೇಗೌಡ ಜಯಂತ್ಯುತ್ಸವ

• ಉದಯವಾಹಿನಿ, ಮೈಸೂರು

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಜೂನ್ 27ರಂದು (ಶನಿವಾರ) ಕಲಾಮಂದಿರ ದಲ್ಲಿ ಅದ್ದೂರಿಯಾಗಿ ನಡೆದಿದೆ.

ಆಂಜನೇಯ ದೇವಸ್ಥಾನದಿಂದ ಕಲಾಮಂದಿರದವರೆಗೆ ವಿಜೃಂಭಣೆಯ ಮೆರವಣಿಗೆ ಕೆಂಪೇಗೌಡರ ಸಾಧನೆ. ಆದಿಚುಂಚನಗಿರಿ ಮಠ, ಶಿಕ್ಷಣ, ರೈತರ ಬದುಕು, ಒಕ್ಕಲಿಗ ಸಮುದಾಯದ ಸಾಧಕರನ್ನು ಪ್ರತಿಬಿಂಬಿಸುವ ಐದು ಸ್ತಬ್ಧಚಿತ್ರ, ವಿವಿಧ ಭಾಗಗಳಿಂದ 20 ಕಲಾ ತಂಡಗಳು ಪಾಲ್ಗೊಳ್ಳುವುದು ವಿಶೇಷ ಎಂದು ಎಂದು ಕೆಂಪೇಗೌಡ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಪಿ.ಪ್ರಶಾಂತ್ ಗೌಡ ತಿಳಿಸಿದರು. 500 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿವಿಧ ಸಮುದಾಯಗಳ 36 ಸಾಧಕರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ. ನಾಲ್ಕು ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಎಂಟು ಉಪಸಮಿತಿ ರಚಿಸಲಾಗಿದ್ದು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ, ಸಮುದಾಯದ ಸಂಸ್ಥೆಗಳು ಸಹಕಾರ ನೀಡಿವೆ ಎಂದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಆಶ್ರಯದಲ್ಲಿ ನಡೆಯುವ ಕಾರ್ಯಕ್ರಮವನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

## ಎಚ್.ಡಿ.ಕೋಟೆ: ಮತದಾರರ ಪಟ್ಟಿ ಪರಿಷ್ಕರಣೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ

• ಉದಯವಾಹಿನಿ, ಎಚ್.ಡಿ.ಕೋಟೆ

'ಮತದಾರರ ಪಟ್ಟಿ ಪರಿಷ್ಕರಣೆ (ಎಸ್ಐಆರ್) ಬಗ್ಗೆ ಮತದಾರರಿಗೆ ಜಾಗೃತಿ ಮೂಡಿಸಲು ಕಾಂಗ್ರೆಸ್‌ನಿಂದ ಆರು ತಿಂಗಳುಗಳಿಂದ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಕಾಂಗ್ರೆಸ್ ಕಾರ್ಯಕರ್ತರು ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ಕಾರ್ಯ ವಹಿಸಬೇಕು' ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಜಾಗೃತ ಕರ್ನಾಟಕ ಸಂಘಟನೆಯಿಂದ ಪಕ್ಷದ ಬೂತ್ ಲೆವಲ್ ಏಜೆಂಟ್‌ಗಳಿಗೆ ಆಯೋಜಿಸಿದ್ದ ಎಸ್ಐಆರ್ ಕುರಿತು ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಮತದಾರ ಪಟ್ಟಿ ಪರಿಷ್ಕರಣೆಯಿಂದ ಕೆಲ



ಉದಯವಾಹಿನಿ ಚಿತ್ರ

ಮತದಾರರ ಹೆಸರು ಕೈಬಿಡುವ ಸಾಧ್ಯತೆಯಿದೆ. ಆದ್ದರಿಂದ, ಏಜೆಂಟ್‌ಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ ಪ್ರತಿಯೊಬ್ಬರ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು. 'ತಾಲ್ಲೂಕಿನ 282 ಬೂತ್‌ಗಳ ಮತದಾರರ ಮಾಹಿತಿಯನ್ನು ಪಕ್ಷದ ಬಿಎಲ್ಎಗಳಿಗೆ ಒದಗಿಸಿದ್ದು, ಸರ್ಕಾರ ನಿಯೋಜಿಸಿರುವ ಅಧಿಕಾರಿಗಳ ಜೊತೆ ನಿಕಟ ಸಂಪರ್ಕ ಸಾಧಿಸಿ. ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ನೀಡಿ ಹೆಸರು ನೋಂದಾಯಿಸಿಕೊಳ್ಳಬೇಕು. ಅ. 5ರಂದು ಸರ್ಕಾರ ಬಿಡುಗಡೆ ಮಾಡುವ ನೂತನ ಕರಡು ಪಟ್ಟಿಯಲ್ಲಿ ನಿಮ್ಮ ಹೆಸರಿದ್ದರೆ ಮಾತ್ರ ನೀವು ಮತದಾರರಾಗಿ ಅಧಿಕೃತವಾಗಲಿದ್ದೀರಿ' ಎಂದು ತಿಳಿಸಿದರು. ಸಂವಿಧಾನ ಸಂರಕ್ಷಣಾ ಪಡೆಯ ವಲಯ ಸಂಯೋಜಕ ಉಮೇಶ್ ಬಿ. ನೂರಲಕುಪ್ಪೆ ಮಾತನಾಡಿ, 'ಎಸ್ಐಆರ್ ಸಂಬಂಧ ಚುನಾವಣಾ ಆಯೋಗ ಕೇಳಿರುವ ವಾಸಸ್ಥಳ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಸುಲಭವಾಗಿ ಜನರಿಗೆ ಸಿಗುವ ವ್ಯವಸ್ಥೆ ಮಾಡಬೇಕು.

ಸರಗೂರು ಮತ್ತು ಎಚ್.ಡಿ.ಕೋಟೆಯಲ್ಲಿ ಶಾಸಕರ ಮಾರ್ಗದರ್ಶನದಲ್ಲಿ ಸಹಾಯವಾಣಿ ತೆರೆಯಬೇಕು. ಇಲ್ಲವಾದರೆ ನಮ್ಮ ಕ್ಷೇತ್ರದಲ್ಲಿ ಅಂದಾಜು 25,000 ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗುತ್ತಾರೆ.

# ಕೂಡಲೇ ನಿವೇಶನ ವಾಪಸ್ ಪಡೆಯಲು ಕುಡಾ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಒತ್ತಾಯ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಸೇವಾ ಸಂಸ್ಥೆಗಳಿಗೆ ನೀಡಬೇಕಾದ ನಿವೇಶನ ಶಾಸಕರಿಗೆ ನೀಡಿರುವುದು ಸರಿಯಲ್ಲ, ಬಡ ಸಂಸ್ಥೆಗಳಿಗೆ ನೀಡಬೇಕಿತ್ತು, ಶಾಸಕ ಸ್ಥಾನಕ್ಕೆ ಕಳಂಕ ತರುವ ರೀತಿಯಲ್ಲಿ ನಿವೇಶನ ಮಂಜೂರು ಮಾಡಿಸಿಕೊಂಡಿರುವುದು ಅವರಿಗೆ ಶೋಭೆ ತರುವುದಿಲ್ಲ ಎಂದು ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಾಸಕರು ಹಣ ಇರುವ ಜಮೀನು ಖರೀದಿಸಬೇಕಿದ್ದು, ವಿದ್ಯಾ ಸಂಸ್ಥೆಗಳನ್ನು ಕಟ್ಟಿ, ನಾಗರಿಕರ ಸೌಲಭ್ಯಕ್ಕಾಗಿ ಇರುವ ನಿವೇಶನ ಪಡೆಯಲು ಶಾಸಕರು ಮುಂದಾ ಗಿರುವುದು ಸರಿಯಲ್ಲ ಟೀಕಿಸಿದರು.

ಮೂರು ನಿವೇಶನ ಪಡೆಯಲು ಶಾಸಕರು ಮುಂದಾಗಿದ್ದಾರೆ. ನಿಯಮಗಳನ್ನೂ ಗಾಳಿಗೆ ತೂರಿ ನಿವೇಶನ ಮಂಜೂರು ಮಾಡಲಾಗಿದೆ. ಅರ್ಜಿ ಸಲ್ಲಿಸಿದ 15 ದಿನದೊಳಗೆ ನಿವೇಶನ ಮಂಜೂರು ಮಾಡಿದ್ದಾರೆ. ಇವರಿಗಿಂತ ಮೊದಲೇ ಅರ್ಜಿ ಸಲ್ಲಿಸಿದವರಿಗೆ ಯಾಕೆ ನಿವೇಶನ ನೀಡಿಲ್ಲ,



ಉದಯವಾಹಿನಿ ಚಿತ್ರ

ಬಡವರು ಸಿಎ ನಿವೇಶನ ಪಡೆಯಬಾರದೇ, ಕ್ಷೇತ್ರದ ಜನರು ಇದಕ್ಕೇನಾ ನಿಮಗೆ ಮತ ಹಾಕಿರುವುದು, ಪ್ರಾಧಿಕಾರದ ಸಮಿತಿಯ ಗಮನಕ್ಕೂ ಬಾರದೆ ನಿವೇಶನ ಮಂಜೂರು ಮಾಡಲಾಗಿದೆ ಎಂದು ಆರೋಪಿಸಿದರು.

ಮುಖಂಡ ಬಾಲಕುಂಟಹಳ್ಳಿ ಗಂಗಾಧರ್ ಮಾತನಾಡಿ, ಶಾಸಕರು ಕ್ಷೇತ್ರದಲ್ಲಿ ಒಂದಾದರೂ ಒಳ್ಳೆಯ ಕೆಲಸವನ್ನು ಮಾಡಿಲ್ಲ, ಮಾಡಿದ್ದರೆ ಕಾಣುತ್ತಿತ್ತಲ್ಲವೇ, ಅವರ ನಿವಾಸದ ಮುಂದೆ ಪ್ರತಿಭಟನೆ ಮಾಡೋಣ ಎಂದರೆ ಅವರ ಮನೆ ಎಲ್ಲಿದೆ ಎಂಬುದೇ ಗೊತ್ತಿಲ್ಲ, ಕ್ಷೇತ್ರದಲ್ಲಿ ಪರಿಶಿಷ್ಟರ ಕಾಲೋನಿಗಳಲ್ಲಿ ರಸ್ತೆ, ಚರಂಡಿ ಇಲ್ಲ, ಅದರ ಕಡೆ ಗಮನ ಹರಿಸಿಲ್ಲ, ಬಡವರಿಗೆ ನಿವೇಶನ ನೀಡಿಲ್ಲ, ಆತನು ಮಾಡಿರುವ ಹಗರಣ ಮುಚ್ಚಿಡಲು ಮತ್ತೊಬ್ಬರ ಮೇಲೆ ಆರೋಪ ಮಾಡುವುದನ್ನು ಶಾಸಕರು ರೂಢಿಸಿಕೊಂಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಏನು ಮಾಡಿದ್ದೀರಿ ಅದನ್ನು ಹೇಳಿ ಎಂದು ಪ್ರಶ್ನಿಸಿದರು.

ನೀವು ಬದುಕಲು ಶಾಸಕರಾಗಿಲ್ಲ, ಬಡವರಿಗೆ ಅನುಕೂಲ ಮಾಡುವ ಕೆಲಸ ಮಾಡಿ, ಅಧಿಕಾರ ದುರುಯೋಗ ಮಾಡುವುದು ಒಳ್ಳೆಯದಲ್ಲ, ಈಗಲೂ ಅವಕಾಶವಿದೆ, ನಿವೇಶನ ಕೈಬಿಡಿ, ಮಾತೆತ್ತಿದ್ದರೆ ಒಬಿಸಿ ಹುಡುಗ ಅಂತಾನೆ, ಒಬಿಸಿ ಸಮುದಾಯಗಳಿಗೆ ಏನು ಮಾಡಿದ್ದಾರೆ.

ಅನಾಥ ಹುಡುಗ ಅಂತಾನೆ, ಕೋಟ್ಯಂತರ ರುಪಾಯಿ ಆಸ್ತಿ ಇದ್ದು ಅನಾಥ ಹೇಗಾಗಲು ಸಾಧ್ಯ, ಅನಾಥ ಎಂದು ನೂರಾರು ಕೋಟಿ ಹೇಗೆ ಮಾಡಿದೆ, ಭಿಕ್ಷೆ ಬೇಡೋರು ಅನಾಥರು, ಶಾಸಕರು ಯಾವ ಅನಾಥ, ಶಾಸಕ ಅಂದರೆ ಏನು ಅನ್ನೋದು ತಿಳಿದು ಮಾತನಾಡಿ, ಕುಮಾರಸ್ವಾಮಿ ಬಗ್ಗೆ ಮಾತನಾಡುವ ಅಗತ್ಯ ಏನಿದೆ, ಚಿಕ್ಕಬಳ್ಳಾಪುರದ ಬಗ್ಗೆ ಮಾತನಾಡಿ, ಸರ್ಕಾರದ ಯೋಜನೆಗಳನ್ನು ತಂದು ಜನರಿಗೆ ನೀಡಿ, ಕುಂಠಿತಗೊಂಡಿರುವ ಕಾಮಗಾರಿ ಪೂರ್ಣಗೊಳಿಸಿ, ಹಾಸ್ಟೆಲ್‌ನಲ್ಲಿ ಮಕ್ಕಳ ಊಟದಲ್ಲಿ ಹುಳ ಇದೆ ಎಂಬ ಆರೋಪ ಕೇಳಿಬಂದಿದೆ.

ಈ ಶಾಸಕರಿಗೆ ಹಾಸ್ಟೆಲ್ ಎಲ್ಲಿದೆ ಎಂಬುದೇ ಗೊತ್ತಿಲ ಎಂದು ಲೇವಡಿ ಮಾಡಿದರು.

ಆಶ್ರಯ ಸಮಿತಿ ಸಭೆ ಮಾಡಿಲ್ಲ, ಕೆಡಿಪಿ ಸಭೆಗೆ ಬರಲ್ಲ, ಅಂಬೇಡ್ಕರ್ ಜಯಂತಿಗೆ ಬರಲ್ಲ, ಯಾವ ಕಾರಣಕ್ಕೆ ನೀವು ಶಾಸಕರಾಗಿದ್ದೀರಿ, ಅಮ್ಮ ಆಂಬುಲೆನ್ಸ್ ಚಾಲಕನಿಲ್ಲ, ಡೀಸೆಲ್ ಇದೆಯೋ ಇಲ್ಲವೋ ಗೊತ್ತಿಲ್ಲ, ಸರ್ಕಾರಿ ಆಂಬುಲೆನ್ಸ್‌ಗಳು ಮೂಲೆಗೆ ಬಿದ್ದಿವೆ, ಯಾವುದೋ ಮಗುವನ್ನು ತೋರಿಸಿ, ಅಮ್ಮ ಆಂಬುಲೆನ್ಸ್‌ನಿಂದ ಬದುಕಿದ್ದಾರೆ ಅಂತ ಪ್ರಚಾರ ಪಡೆಯೋದಲ್ಲ, ನೀವು ಮಾಡುವ ಸೇವೆ ಬಗ್ಗೆ ಹೇಳೋದು ಬೇಡ, ಅಭಿವೃದ್ಧಿಯ ಬಗ್ಗೆ ಹೇಳಿ ಎಂದು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯ ಅರುಣ್‌ಕುಮಾರ್, ಕೃಷ್ಣಮೂರ್ತಿ, ಬಾಲಕುಂಟಹಳ್ಳಿ ಗಂಗಾಧರ್ ಮತ್ತಿರರು ಇದ್ದರು.

# ಮುತ್ತತ್ತಿ ಪ್ರವಾಸಿ ತಾಣ 'ಮೃತ್ಯುಕೂಪ

• ಉದಯವಾಹಿನಿ,ಮಂಡ್ಯ


ಪ್ರವಾಸಿಗರ ಸುರಕ್ಷತೆ ಇಲ್ಲದ ಕಾರಣ ಮಳವಳ್ಳಿ ತಾಲ್ಲೂಕಿನ ಮುತ್ತತ್ತಿ ಪ್ರವಾಸಿ ತಾಣದಲ್ಲಿ ಕಳೆದ 10 ವರ್ಷಗಳಲ್ಲಿ 82 ಪ್ರವಾಸಿಗರು ನೀರು ಪಾಲಾಗಿದ್ದಾರೆ. ಎರಡು ದಿನಗಳ ಹಿಂದೆ ಕಾವೇರಿ ನದಿಯಲ್ಲಿ ಈಜಾಡುತ್ತಾ ಸೆಲ್ಫಿ ತೆಗೆದುಕೊಳ್ಳುವ ವೇಳೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಜೆ.ಬ್ಯಾಡರಹಳ್ಳಿಯ ನಾಲ್ವರು ಮಹಿಳೆಯರು ಮತ್ತು ಕಾರು ಚಾಲಕ ಸೇರಿದಂತೆ ಐವರು ಮೃತಪಟ್ಟಿದ್ದರು. ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಯಲ್ಲಿ ಬರುವ ಮುತ್ತತ್ತಿ ದಟ್ಟವಾದ ಅರಣ್ಯ ಮತ್ತು ರಮಣೀಯ ಬೆಟ್ಟಗಳ ನಡುವೆ ಹರಿಯುವ ಕಾವೇರಿ ನದಿಯ ಸೊಬಗನ್ನು ಕಣ್ಣುಂಬಿಕೊಳ್ಳಲು ನಿತ್ಯ ನೂರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಆಂಜನೇಯ ದೇವಸ್ಥಾನ ಪ್ರಮುಖ ಆಕರ್ಷಣೆಗಳಲ್ಲೊಂದು.

ದೇವಸ್ಥಾನಕ್ಕೆ ಬರುವ ಭಕ್ತರು ಮತ್ತು ಪ್ರವಾಸಿಗರು ವಿಸ್ತಾರವಾಗಿ ಹರಿಯುವ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ಮತ್ತು ಈಜಲು ಹೋಗುತ್ತಾರೆ. ಈಜು ಬಾರದವರು ನದಿಯಲ್ಲಿ ಮುಳುಗಿ ಮೃತಪಟ್ಟರೆ, ಮತ್ತೆ ಕೆಲವರು ಆಳವಾದ ನೀರಿಗೆ ಇಳಿದು, ನದಿಯ ಸೆಳೆತಕ್ಕೆ ಕೊಚ್ಚಿಕೊಂಡು ಹೋಗಿ ಜೀವತೆತ್ತಿದ್ದಾರೆ. ನದಿಯಲ್ಲಿರುವ ಸುಳಿಗಳಿಂದಲೂ ಅಪಾಯ ಸಂಭವಿಸುತ್ತಿದೆ.

**ನಿಯಮ ಉಲ್ಲಂಘನೆ:** ನದಿಯಲ್ಲಿ ಈಜುವುದಕ್ಕೆ ನಿಷೇಧ, ಅಪಾಯ ವಲಯ, ಮೊಸಳೆ ಇದೆ ನೀರಿಗೆ ಇಳಿಯಬಾರದು ಮುಂತಾದ ಸೂಚನಾ

### 10 ವರ್ಷಗಳಲ್ಲಿ 82 ಪ್ರವಾಸಿಗರು ನೀರುಪಾಲು

> **ಈಜಲು ನಿರ್ದಿಷ್ಟವಾದ ಸ್ಥಳ ಗುರುತಿಸಿ, ಬ್ಯಾರಿಕೇಡ್‌ಗಳನ್ನು ಹಾಕಿ 'ಸುರಕ್ಷಿತಾ ವಲಯ' ಸ್ಥಾಪಿಸಬೇಕು. ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಡಿಸಿಗೆ ಸೂಚಿಸಿದ್ದೇನೆ.**
> ರಾಮಲಿಂಗಾ ರೆಡ್ಡಿ, ಜಲಸಂಪನ್ಮೂಲ ಸಚಿವ



ಉದಯವಾಹಿನಿ ಚಿತ್ರ

ಲೆಕ್ಕಿಸದೆ ಪ್ರವಾಸಿಗರು ನದಿಯಲ್ಲಿ ಈಜಲು ಹೋಗುತ್ತಾರೆ. 'ಕಾವೇರಿ ನದಿಯಲ್ಲಿ ಮೃತಪಟ್ಟಿರುವ ಪ್ರವಾಸಿಗರ ವರ್ಷವಾರು ಸಾವಿನ ಸಂಖ್ಯೆಯ ಫಲಕವನ್ನು ನೋಡಿಯೂ ನೀರಿಗಿಳಿಯುತ್ತಾರೆ. ನೀರಿಗೆ ಇಳಿಯಬೇಡಿ ಎಂದು ತಡೆಯಲು ಹೋದರೆ ಜಗಳಕ್ಕೇ ಬರುತ್ತಾರೆ' ಎಂದು ಗೃಹರಕ್ಷಕ ದಳದ ಸಿಬ್ಬಂದಿ ಅಳಲು ತೋಡಿಕೊಂಡರು. 'ಕಾವೇರಿ ನದಿಗೆ ಇಳಿಯದಂತೆ ಭದ್ರತಾ ಸಿಬ್ಬಂದಿ ತಿಳಿಸಿದರೂ ಪ್ರವಾಸಿಗರು ಕೇಳುತ್ತಿಲ್ಲ. ಧಾರ್ಮಿಕ ಭಾವನೆಗೆ ಧಕ್ಕೆ ತರಬೇಡಿ ಎಂದು ಆಕ್ಷೇಪಿಸುತ್ತಾರೆ. ಜೀವದ ಜತೆ ಆಟವಾಡದೆ ಸುರಕ್ಷತೆಗೆ ಆದ್ಯತೆ ನೀಡಬೇಕಿದೆ' ಎಂದು ಹಲಗೂರು ಸಬ್‌ಇನ್‌ಸ್ಪೆಕ್ಟರ್ ಲೋಕೇಶ್ ತಿಳಿಸಿದರು. 'ರಾಮಾಯಣ ಕಾಲದಲ್ಲಿ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರು ವನವಾಸದಲ್ಲಿದ್ದಾಗ ಇಲ್ಲಿಗೆ ಭೇಟಿ ನೀಡಿದ್ದರು ಎಂಬ ಐತಿಹ್ಯವಿದೆ. ಕಾವೇರಿ ನದಿಯಲ್ಲಿ ಸೀತಾಮಾತೆ ಸ್ನಾನ ಮಾಡುವಾಗ ಆಕೆಯ ಮುತ್ತಿನ ಮೂಗುತಿ (ಮುತ್ತು) ನೀರಿನಲ್ಲಿ ಬಿದ್ದಾಗ, ಹನುಮಂತನು ತನ್ನ ಬಾಲವನ್ನು ನೀರಿನಲ್ಲಿ ಇಳಿಸಿ ಮೂಗುತಿಯನ್ನು ಮೇಲೆತ್ತಿ ಕೊಟ್ಟಿದ್ದರಿಂದ ಈ ಸ್ಥಳಕ್ಕೆ 'ಮುತ್ತತ್ತಿ' ಎಂಬ ಹೆಸರು ಬಂದಿದೆ. ಸೀತಾದೇವಿಯು ಹನುಮಂತನಿಗೆ 'ಮುತ್ತೆತ್ತರಾಯ' ಎಂದು ನಾಮಕರಣ ಮಾಡಿದರು' ಎಂದು ಗ್ರಾಮಸ್ಥರು ತಿಳಿಸಿದರು.

### ಪೊಲೀಸ್ ಉಪಠಾಣೆ ಸ್ಥಾಪಿಸಿ: ಎಚ್‌ಡಿಕೆ

**ಕಾವೇರಿ ನದಿಯಲ್ಲಿ ನಿರಂತರವಾಗಿ ಪ್ರವಾಸಿಗರು ನದಿಯ ನೀರಿನ ಸುಳಿಗಳಿಗೆ ಸಿಲುಕಿ ಜೀವ ಕಳೆದುಕೊಳ್ಳುತ್ತಿರುವ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮುತ್ತತ್ತಿಯಲ್ಲಿ ಪೊಲೀಸ್ ಉಪಠಾಣೆ ತೆರೆಯುವ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ. ಮುತ್ತತ್ತಿಯ ಕಾವೇರಿ ನದಿ ಬಾಗದ ಪ್ರದೇಶದಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಬೇಕು, ಎಚ್ಚರಿಕೆಯ ಫಲಕಗಳನ್ನು ಅಳವಡಿಸಬೇಕು ಮತ್ತು ನದಿಗೆ ಇಳಿಯದಂತೆ ತಡೆಯಲು ದಂಡೆಯ ಉದ್ದಕ್ಕೂ ಮುಳ್ಳಿನ ತಂತಿ-ಬ್ಯಾರಿಕೇಡ್'ಗಳನ್ನು ಅಳವಡಿಸಲು ತುರ್ತುಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.**


ಉದಯವಾಹಿನಿ

ಪ್ರಾದೇಶಿಕ

ಭಾನುವಾರ 28 ಜೂನ್ 2026




## ಮಿನಿ ನ್ಯೂಸ್

### ಶ್ರದ್ಧಾ-ಭಕ್ತಿಯಿಂದ ಮೊಹರಂ ಆಚರಣೆ

• ಉದಯವಾಹಿನಿ, ಪಾವಗಡ

ಹಿಂದೂ-ಮುಸ್ಲಿಮರ ಭಾವೈಕ್ಯತೆ, ಸೌಹಾರ್ದತೆ ಮತ್ತು ಸಹಬಾಳ್ವೆಯ ಪ್ರತೀಕವಾಗಿರುವ ಮೊಹರಂ ಹಬ್ಬವನ್ನು ಪಟ್ಟಣದಲ್ಲಿ ಅತ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಪಟ್ಟಣದ ವಿವಿಧ ಭಾಗಗಳಲ್ಲಿ ಅಲಂಕರಿಸಲಾದ ಪಂಜಾಗಳು, ಧಾರ್ಮಿಕ ಆಚರಣೆಗಳು ಹಾಗೂ ಭಕ್ತರ ಭಾಗವಹಿಸುವಿಕೆಯಿಂದ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಮೊಹರಂ ಹಬ್ಬವನ್ನು ಪಾವಗಡದಲ್ಲಿ ಹಲವು ವರ್ಷಗಳಿಂದ ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಒಗ್ಗಟ್ಟಿನಿಂದ ಆಚರಿಸಿಕೊಂಡು ಬರುತ್ತಿರುವ ಸೌಹಾರ್ದತೆಯ ಹಬ್ಬವಾಗಿದೆ. ವಿವಿಧ ಸಮುದಾಯಗಳ ಜನರು ಒಂದಾಗಿ ಸೇರಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಪರಸ್ಪರ ಸಹೋದರತ್ವದ ಸಂದೇಶವನ್ನು ಸಾರಿದ್ದಾರೆ.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಂಜಾಗಳ ಮೆರವಣಿಗೆ, ಸಾಂಪ್ರದಾಯಿಕ ವಾದ್ಯಗಳ ನಾದ ಹಾಗೂ ಭಕ್ತರ ಜಯಘೋಷಗಳು ಹಬ್ಬದ ಮೆರುಗನ್ನು ಮತ್ತಷ್ಟು ಹೆಚ್ಚಿಸಿದವು.

ಶಾಂತಿ, ಸೌಹಾರ್ದತೆ ಮತ್ತು ಪರಸ್ಪರ ಗೌರವದ ಸಂದೇಶ ಸಾರುತ್ತಿರುವ ಈ ಆಚರಣೆ ಸಾರ್ವಜನಿಕರ ಗಮನ ಸೆಳೆದಿದೆ.

### ವಿದ್ಯುತ್ ವಲಯ ಖಾಸಗೀಕರಣ ಬೇಡ ಎಂದು ಕೆ.ಆರ್.ಪೇಟೆಯಲ್ಲಿ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪೇಟೆ

ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ನಿಗಮಗಳನ್ನು ಮತ್ತು ಕೆಪಿಟಿಸಿಎಲ್ ಇಲಾಖೆಯನ್ನು ಖಾಸಗಿಕರಣ ಮಾಡದೆ ಸರ್ಕಾರಿ ಸ್ವಾಮ್ಯದಲ್ಲಿಯೇ ಮುಂದುವರಿಸಬೇಕು ಎಂದು ಒತ್ತಾಯಿಸಿ ತಾಲ್ಲೂಕು ಕೆಪಿಟಿಸಿಎಲ್ ನೌಕರರ ಯೂನಿಯನ್ ಹಾಗೂ ಸೆಸ್ಕ್ ನೌಕರರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ವಿಭಾಗೀಯ ಕಚೇರಿ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ನೌಕರರು, ಕೇಂದ್ರ ಸರ್ಕಾರವು ಯಾವುದೇ ಕಾರಣಕ್ಕೂ ವಿದ್ಯುತ್ ಇಲಾಖೆಯನ್ನು ಖಾಸಗಿಕರಣಗೊಳಿಸಬಾರದು. ಖಾಸಗಿಕರಣ ಮಾಡಿದರೆ ನೇರವಾಗಿ ರೈತರಿಗೆ ತೀವ್ರ ತೊಂದರೆಯಾಗಲಿದೆ ಎಂದರು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಿಗುತ್ತಿರುವ ಉಚಿತ ವಿದ್ಯುತ್ ಸೌಲಭ್ಯ ಬಂದ್ ಆಗಲಿದೆ. ವಿದ್ಯುತ್ ಸಂಪರ್ಕಕ್ಕೆ ಮೊಬೈಲ್‌ಗಳಿಗೆ ಪ್ರೀಪೇಯ್ಡ್ ಮಾದರಿ ಹಣ ಪಾವತಿ ಮಾಡಿಸಿಕೊಂಡು ಸ್ಮಾರ್ಟ್ ಮೀಟರ್ ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಖಾಸಗಿಕರಣ ಮಾಡಬಾರದೆಂದು ಒತ್ತಾಯಿಸಿದರು. ಈಗಾಗಲೇ ಟಾಟಾ ಪವರ್ ಕಂಪನಿ ನಮ್ಮ ರಾಜ್ಯದ 5 ಎಸ್ಕಾಂಗಳ ವ್ಯಾಪ್ತಿಯ ಪ್ರಮುಖ 19 ಜಿಲ್ಲೆಗಳ ವಿದ್ಯುತ್ ವಿತರಣೆ ಮಾಡಲು ಸಮಾಂತರ ಪರವಾನಗಿ ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ (ಕೆ.ಇ.ಆರ್.ಸಿ) ಅರ್ಜಿ ಸಲ್ಲಿಸಿರುತ್ತದೆ. ಇದು ಸಾರ್ವಜನಿಕರು, ಗ್ರಾಹಕರು, ರೈತರು ಹಾಗೂ ವಿದ್ಯುತ್ ನೌಕರರ ಹಿತಾಸಕ್ತಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ.

ಖಾಸಗಿಕರಣದಿಂದಾಗಿ ನೌಕರರ ಉದ್ಯೋಗ ಭದ್ರತೆಗೂ ಧಕ್ಕೆಯುಂಟಾಗಲಿದೆ. ಹಾಗಾಗಿ ಉದ್ದೇಶಿತ ಕ್ರಮವನ್ನು ಕೈಬಿಡಬೇಕು ಎಂದು ರೈತ ಮುಖಂಡ ಮುದುಗೆರೆ ರಾಜೇಗೌಡ ಒತ್ತಾಯಿಸಿದರು.

ಅಧ್ಯಕ್ಷ ಎಚ್.ಸಿ.ಶಿವಶಂಕರಮೂರ್ತಿ, ಎಇಇ ಶಂಕರ್, ಪ್ರವೀಣ್ ಕುಮಾರ್, ಪವನ್ ಕುಮಾರ್, ಟಿ.ಜಿ.ತಿಮ್ಮಪ್ಪ, ಲೆಕ್ಕಾಧಿಕಾರಿ ಮಹೇಶ್ಚಂದ್ರು, ಮಹಿಳಾ ಯೂನಿಯನ್ ಪದಾಧಿಕಾರಿಗಳಾದ ರುಕ್ಕಿಣಿ, ಗೀತಾ, ಪವಿತ್ರಾ, ಸವಿತಾ, ವರಲಕ್ಷ್ಮಿ, ಸೇರಿದಂತೆ ಚೆಸ್ಕಾಂ ಹಾಗೂ ಕೆಪಿಟಿಸಿಎಲ್ ನೌಕರರು, ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

### ಬಾಲಕೃಷ್ಣ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾಗಿ ಅವಿರೋಧ ಆಯ್ಕೆ

• ಉದಯವಾಹಿನಿ, ಶ್ರೀರಂಗಪಟ್ಟಣ

ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಕಾರ್ಡ್) ಬ್ಯಾಂಕ್ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಬಿ.ಎಸ್.ಬಾಲಕೃಷ್ಣ ಅವಿರೋಧವಾಗಿ ಆಯ್ಕೆಯಾದರು. ನಿಕಟಪೂರ್ವ ಅಧ್ಯಕ್ಷ ಬಿ.ಚಲುವೇ ಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಈ ಆಯ್ಕೆ ನಡೆಯಿತು. ಬಿ.ಎಸ್.ಬಾಲಕೃಷ್ಣ ಹೊರತುಪಡಿಸಿ ಇತರರು ನಾಮಪತ್ರ ಸಲ್ಲಿಸಿದ ಕಾರಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟ ಸಹಕಾರ ಅಭಿವೃದ್ಧಿ ಅಧಿಕಾರಿ ಪ್ರಸಾದ್ ಪಿ. ತಿಳಿಸಿದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಿ.ಎಸ್.ಬಾಲಕೃಷ್ಣ, 'ಶಾಸಕ ರಮೇಶ ಬಂಡಿಸಿದ್ದೇಗೌಡ ಹಾಗೂ ಮನ್‌ಮುಲ್ ನಿರ್ದೇಶಕ ಬಿ.ಬೋರೇಗೌಡ ಅವರ ಸಹಕಾರದಿಂದ ಪಿಕಾರ್ಡ್ ಬ್ಯಾಂಕ್‌ನ ಅಧ್ಯಕ್ಷ ಸ್ಥಾನ ಸಿಕ್ಕಿದೆ. ಅವರ ನಿರೀಕ್ಷೆಯಂತೆ ಬ್ಯಾಂಕ್‌ನ ಆರ್ಥಿಕ ವಹಿವಾಟು ವಿಸ್ತರಿಸಲು ಪ್ರಯತ್ನಿಸುತ್ತೇನೆ. ಬ್ಯಾಂಕ್‌ನಿಂದ ಸಾಲ ಪಡೆದಿರುವವರು ಸಕಾಲಕ್ಕೆ ತೀರುವಳಿ ಮಾಡಿದರೆ ಇತರರಿಗೆ ಸಾಲ ಕೊಡಲು ಸಾಧ್ಯವಾಗಲಿದೆ.

ಬ್ಯಾಂಕ್ ಆರ್ಥಿಕ ಸ್ಥಿತಿ ಕೂಡ ಉತ್ತಮವಾಗಲಿದೆ. ಹಾಗಾಗಿ ಸಾಲ ತೀರುವಳಿ ಮಾಡಬೇಕು' ಎಂದು ಮನವಿ ಮಾಡಿದರು.ಬ್ಯಾಂಕ್‌ನ ವ್ಯವಸ್ಥಾಪಕ ಆರ್. ಶ್ರೀನಿವಾಸ್, ಉಪಾಧ್ಯಕ್ಷ ಬುದ್ದೇಗೌಡ, ನಿರ್ದೇಶಕರಾದ ಬಿ.ಚಲುವೇಗೌಡ, ಬಿ.ಜೆ.ನಾಗೇಶಪ್ರಭು, ಸಿ.ದೇವರಾಜು, ಎಚ್.ಡಿ.ಮಹದೇವು, ಬಿ.ಎಸ್.ವಾಸು, ಕಮಲಮ್ಮ, ಬಿ.ಎಸ್.ಮೋಹನ್, ಪಿ.ಸದಾಶಿವ, ಬಿ.ಕೆ.ಮಹದೇವ, ದ್ಯಾವರಸಯ್ಯ, ಚಿಕ್ಕತಾಯಮ್ಮ ಇದ್ದರು.

### ವೇಗವಾಗಿ ಸಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದ ಡಾ.ಎಂ.ಸಿ.ಸುಧಾಕರ್

• ಉದಯವಾಹಿನಿ, ಚಿಂತಾಮಣಿ


ನಗರ ಸ್ವಚ್ಛತೆ ಕಾಪಾಡಬೇ ಕಾದರೆ ಕಸವನ್ನು ನಗರಸಭೆ ವಾಹನಗಳಿಗೆ ನೀಡಬೇಕು ಹಾಗೂ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು ಇದಕ್ಕೆ ಸಾರ್ವಜನಿಕರು ಸಹಕಾರಿಸಬೇಕೆಂದು ಶಾಸಕ ಡಾ.ಎಂ.ಸಿ.ಸುಧಾಕರ್ ಹೇಳಿದರು.

ನಗರದ ಆಜಾದ್ ಚೌಕ ಮತ್ತು ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿ ಗಳನ್ನು ವೀಕ್ಷಣೆ ಮಾಡಿ ಮಾತನಾಡಿ ನಗರದ ಹೃದಯ ಭಾಗದಲ್ಲಿರುವ ಆಜಾದ್ ಚೌಕದಲ್ಲಿ ನಿರ್ಮಾಣ ಗೊಂಡಿರುವ ಉದ್ಯಾನವನಕ್ಕೆ ನೆರೆಯ ಆಂಧ್ರಪ್ರದೇಶದ ರಾಜಮಂಡ್ರಿಯಿಂದ ವಿವಿಧ ರೀತಿಯ ವಿಶಿಷ್ಟ ಗಿಡಗಳನ್ನು ತರಿಸಿ ಅವುಗಳನ್ನು ನೆಡುವಂತೆ ಮಾಡಿ ನಗರದ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ಪರಿಸರದಲ್ಲಿ ಗಿಡಗಳ ಮಹತ್ವದ ಕುರಿತು ಹಾಗೂ ಈ ಸ್ಥಳದಲ್ಲಿರುವ ದೇವಾಲಯಕ್ಕೆ ಬರುವ ಸಾರ್ವಜನಿಕರಿಗೆ ಅನುಕೂಲವಾಗುವ ವಾತಾವರಣ ನಿರ್ಮಾಣ ಮಾಡುವಲ್ಲಿ ನೆರವಾಗಲಿದೆ.ಇಲ್ಲಿಯೇ ಎಲ್‌ಇಡಿ ಪರದೆ ವ್ಯವಸ್ಥೆಯನ್ನು ಕೈಗೊಂಡಿದ್ದು ಸರ್ಕಾರ ವಿವಿಧ ಕಾರ್ಯಕ್ರಮಗಳು ಹಾಗೂ ಜನರಿಗೆ ಅಗತ್ಯವಿರುವ ದೃಶ್ಯಗಳು ಬಿತ್ತರಗೊಳ್ಳುತ್ತದೆಯೆಂದರು.

ಪ್ಲಾಸ್ಟಿಕ್ ಸಂಪೂರ್ಣವಾಗಿ ಬಳಕೆ ಮಾಡುವುದನ್ನು ನಿಯಂತ್ರಿಸ ಬೇಕಾದರೆ ಅದು ಕೇವಲ ಸಾರ್ವಜನಿಕರಿಂದ ಮಾತ್ರ ಸಾಧ್ಯವೆಂದರು. ಈ ಸಂದರ್ಭದಲ್ಲಿ ಪೌರಾಯುಕ್ತಾರಾದ ಜಿ ಎನ್ ಚಲಪತಿ, ಮುಖಂಡರಾದ ಶೇಕ್ ಸಾಧಿಕ್, ಉಮೇಶ್, ಕೆ ಎಲ್ ಎನ್ ನಾಗರಾಜ್, ಮಾಜಿ ನಗರಸಭಾ ಸದಸ್ಯರಾದ ಜಗದೀಶ್ ಸೇರಿದಂತೆ ಮತ್ತಿತರರು ಇದ್ದರು.

ಅಂತರಾಳದಿಂದ..
EDITORIAL

# ಬರ ಪರಿಸ್ಥಿತಿಯ ನಿರ್ವಹಣೆಗೆ ಆಡಳಿತ ಯಂತ್ರ ಸಜ್ಜಾಗಲಿ



## ಮಳೆ ನೀರು ಸಂಗ್ರಹಕ್ಕೆ ಆದ್ಯತೆ ನೀಡುವ ಮೂಲಕ ನೀರಿನ ಕೊರತೆ ತೀವ್ರಗೊಳ್ಳದಂತೆ ಜನತೆ ಎಚ್ಚರಿಕೆ

ಪ್ರಸಕ್ತ ಸಾಲಿನ ಮುಂಗಾರು ಋತುವಿನ ಮೊದಲ ಮಾಸ ಮುಕ್ತಾಯಗೊಳ್ಳಲು ಮೂರು ದಿನಗಳಷ್ಟೇ ಬಾಕಿ ಉಳಿದಿರುವಂತೆಯೇ ರಾಜ್ಯದಲ್ಲಿ ಈಗಾಗಲೇ ಶೇ. 41ರಷ್ಟು ಮಳೆ ಕೊರತೆ ಎದುರಾಗಿದೆ. ಜಾಗತಿಕ ಹವಾಮಾನ ವಿದ್ಯಮಾನವಾದ ಎಲ್ ನಿನೋದ ಪರಿಣಾಮದಿಂದಾಗಿ ಪ್ರಸಕ್ತ ವರ್ಷ ಜಾಗತಿಕವಾಗಿ ಮಳೆ ಕೊರತೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡುತ್ತಲೇ ಬಂದಿದ್ದು, ಹವಾಮಾನ ತಜ್ಞರ ಪೂರ್ವಾನುಮಾನವನ್ನು ಮೀರಿ ಈಗಾಗಲೇ ರಾಜ್ಯದಲ್ಲಿ ಮಳೆಯ ತೀವ್ರ ಅಭಾವ ಕಾಡಿದೆ.

ಮಳೆಗಾಲವಾದರೂ ರಾಜ್ಯದ 122 ತಾಲ್ಲೂಕುಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಕೊರತೆ ಕಾಡಿದ್ದರೆ, ನೀರಿನ ಅಭಾವದ ತೀವ್ರತೆ ಹೆಚ್ಚಾಗಿರುವ 139 ಹಳ್ಳಿಗಳ ಜನರಿಗೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಮಳೆಯ ಕೊರತೆಯ ಪರಿಣಾಮ ರಾಜ್ಯದೆಲ್ಲೆಡೆ ಕೃಷಿ ಚಟುವಟಿಕೆಗಳು ಸ್ತಬ್ಧಗೊಳ್ಳುವ ಆತಂಕ ಎದುರಾಗಿದೆ. ಎಲ್ ನಿನೋ ಜತೆಯಲ್ಲಿ ಅರಬಿ ಸಮುದ್ರ ಮತ್ತು ಬಂಗಾಲ ಕೊಲ್ಲಿ ಸಾಗರದಲ್ಲಿನ ವ್ಯತಿರಿಕ್ತ ಹವಾಮಾನ ಪರಿಸ್ಥಿತಿಗಳು ಕೂಡ ಮಳೆ ಕೊರತೆಗೆ ಕಾರಣವಾಗಿವೆ. ಹೀಗಾಗಿಯೇ ಮುಂಗಾರು ಆರಂಭದಿಂದಲೂ ಮಳೆ ಕಣ್ಣಮುಚ್ಚಾಲೆಯಾಟ ನಡೆಸುತ್ತಲೇ ಬಂದಿದ್ದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡುವಂತೆ ಮಾಡಿದೆ. ಸಾಗರ ಪ್ರದೇಶದ ವಾತಾವರಣದಲ್ಲಿನ ಅನಿರೀಕ್ಷಿತ ಬದಲಾವಣೆಗಳಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿದಿಲ್ಲ. ಹೀಗಾಗಿ ಈಗಾಗಲೇ ರಾಜ್ಯದಲ್ಲಿ ಮಳೆಯ ತೀವ್ರ ಕೊರತೆಯಾಗಿದೆ.

### ಮಳೆಯ ಕಣ್ಣಾಮುಚ್ಚಾಲೆ ಯಾಟ

ಇನ್ನೂ ಒಂದು ವಾರ ಪರಿಸ್ಥಿತಿ ಇದೇ ರೀತಿಯಾಗಿ ಮುಂದುವರಿದಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗುವುದು ನಿಶ್ಚಿತ. ಈ ನಡುವೆ ಹವಾಮಾನ ಇಲಾಖೆ ರಾಜ್ಯದ ಕೆಲವೆಡೆ ಮುಂದಿನ ದಿನಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆಗಳಿದ್ದು ಪ್ರವಾಹ ಪರಿಸ್ಥಿತಿ ತಲೆದೋರಬಹುದು ಎಂದು ಎಚ್ಚರಿಕೆ ನೀಡಿದ್ದರೆ ಮತ್ತೆ ಹಲವೆಡೆ ಈಗಿನಂತೆ ಮಳೆಯ ಕಣ್ಣಾಮುಚ್ಚಾಲೆಯಾಟ ಮುಂದುವರಿಯಲಿದೆ ಎಂದು ತನ್ನ ಮುನ್ಸೂಚನೆಯಲ್ಲಿ ತಿಳಿಸಿದೆ.

ಮಳೆ ಕೈಕೊಟ್ಟಿರುವುದರಿಂದ ರೈತಾಪಿ ವರ್ಗ ಈಗಾಗಲೇ ಸಂಕಷ್ಟದಲ್ಲಿ ಸಿಲುಕಿದ್ದು ಬೇಸಾಯ ಚಟುವಟಿಕೆಗಳು ಭಾಗಶಃ ಸ್ಥಗಿತಗೊಂಡಿದೆ. ಇನ್ನು ಪೂರ್ವ ಮುಂಗಾರು ಅವಧಿಯಲ್ಲಿ ಒಂದಿಷ್ಟು ಮಳೆ ಸುರಿದಿದ್ದರಿಂದ ಬೇಸಾಯ ಕಾರ್ಯಕ್ಕೆ ಮುಂದಾಗಿದ್ದ ರೈತರ ಶ್ರಮ ಈಗ ವ್ಯರ್ಥವಾಗಿದೆ. ಆದರೆ ಈ ವರ್ಷದ ಆರಂಭದಿಂದಲೂ ಹವಾಮಾನ ಇಲಾಖೆ ಮತ್ತು ಹವಾಮಾನ ತಜ್ಞರ ಲೆಕ್ಕಾಚಾರಗಳೆಲ್ಲವೂ ತಲೆಕೆಳಗಾಗುತ್ತಲೇ ಬಂದಿರುವುದರಿಂದ ಈ ಬಾರಿ ಮುಂಗಾರಿನ ಕುರಿತಂತೆ ಇದಮಿತ್ಥಂ' ಎಂಬ ದೃಢ ನಿರ್ಧಾರಕ್ಕೆ ಬರುವುದು ಕಷ್ಟಸಾಧ್ಯ. ರಾಜ್ಯದ ಬಹುತೇಕ ಎಲ್ಲೆಡೆ ಮಳೆ ಕೊರತೆ ಮುಂದುವರಿದಿರುವಂತೆಯೇ ಕಂದಾಯ ಸಚಿವರು ಉನ್ನತ ಅಧಿಕಾರಿಗಳ ಜತೆ ಸಭೆ ನಡೆಸಿ ಸಂಭಾವ್ಯ ಪರಿಸ್ಥಿತಿ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ನಿರ್ದೇಶನ ನೀಡಿದ್ದಾರೆ. ಇದೇ ವೇಳೆ ಮುಖ್ಯಮಂತ್ರಿಯವರು ತಮ್ಮ ಸಂಪುಟದ ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಜಿಲ್ಲಾವಾರು ಮೇಲುಸ್ತುವಾರಿ ವಹಿಸಿ ಆದೇಶಿಸಿದ್ದಾರೆ. ಸರಕಾರದ ಈ ಎಲ್ಲಾ ಕ್ರಮಗಳು ಆದೇಶ, ಸೂಚನೆಗಳಿಗಷ್ಟೇ ಸೀಮಿತವಾಗದೆ ಬರ ಸಹಿತ ಸಂಭಾವ್ಯ ಪರಿಸ್ಥಿತಿ ಎದುರಿಸಲು ಆಡಳಿತ ಯಂತ್ರ ಈಗಿನಿಂದಲೇ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಬೇಕು. ಸಚಿವರು ಮತ್ತು ಜನಪ್ರತಿನಿಧಿಗಳು ಆಯಾಯ ಜಿಲ್ಲೆಯ ಪರಿಸ್ಥಿತಿಯ ಕುರಿತಂತೆ ದಿನವಹಿ ಅವಲೋಕನ ನಡೆಸುವ ಜತೆಯಲ್ಲಿ ಪರಿಸ್ಥಿತಿಯನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಅಧಿಕಾರಿ ವರ್ಗಕ್ಕೆ ಅಗತ್ಯ ಸಲಹೆ ನೀಡಬೇಕು. ಇನ್ನು ಸದ್ಯ ಆತಂಕದಲ್ಲಿರುವ ರೈತಾಪಿ ವರ್ಗ ಧೃತಿಗೆಡದಂತೆ ಧೈರ್ಯ ತುಂಬಬೇಕು. ಲಭ್ಯವಿರುವ ನೀರಿನ ಸದ್ಬಳಕೆ, ಮಳೆ ನೀರು ಸಂಗ್ರಹಕ್ಕೆ ಆದ್ಯತೆ ನೀಡುವ ಮೂಲಕ ನೀರಿನ ಕೊರತೆ ತೀವ್ರಗೊಳ್ಳದಂತೆ ಜನತೆ ಎಚ್ಚರಿಕೆ ವಹಿಸಬೇಕು.

## ಹಳೆ ಸಂಬಂಧಗಳು ಇಲ್ಲವೇ ಹಣಕಾಸಿನ ವಿಷಯಗಳನ್ನು ಮುಚ್ಚಿಡುತ್ತೀರಾ? ವೈವಾಹಿಕ ಸಂಬಂಧದಲ್ಲಿ ತೊಂದರೆ ಸಾಧ್ಯತೆ



ಅನಿವಾರ್ಯ ಸಂದರ್ಭಗಳಿಂದ ನೀವು ಸಾಂದರ್ಭಿಕವಾಗಿ ಸುಳ್ಳು ಹೇಳಿದರೆ ಜನರು ಅರ್ಥಮಾಡಿಕೊಳ್ಳಬಹುದು. ಆದ್ರೆ, ನೀವು ನಿರಂತರವಾಗಿ ಸತ್ಯವನ್ನು ಮರೆಮಾಡಿದರೆ ಮತ್ತು ಪ್ರತಿಯೊಂದು ಸನ್ನಿವೇಶದಲ್ಲೂ ಸುಳ್ಳು ಹೇಳಿದರೆ ಅಂತಿಮವಾಗಿ ಸಿಕ್ಕಿಬೀಳುತ್ತೀರಿ. ಇದು ನಿಮ್ಮ ಸಂಗಾತಿ ನಿಮ್ಮಲ್ಲಿಟ್ಟಿರುವ ನಂಬಿಕೆಯನ್ನು ಕುಗ್ಗಿಸುತ್ತದೆ. ಸಂಬಂಧಗಳಲ್ಲಿ ಅಪಶ್ರುತಿಗೆ ಇದು ಒಂದು ಪ್ರಮುಖ ಕಾರಣವಾಗುತ್ತದೆ. ಇದು ವಿವಾಹಿತ ದಂಪತಿಗಳಿಗೂ ಅನ್ವಯಿಸುತ್ತದೆ. ದಂಪತಿಗಳು ಎಲ್ಲದರ ಬಗ್ಗೆ ಪಾರದರ್ಶಕ ಆಗಿರಬೇಕಾಗುತ್ತದೆ ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ. ಹಾಗಾದ್ರೆ ನೀವು ನಿಮ್ಮ ಸಂಗಾತಿಗೆ ಅಂತಹ ವಿಷಯಗಳ ಬಗ್ಗೆ ಸುಳ್ಳು ಹೇಳಬಾರದು ಎಂದು ತಜ್ಞರು ತಿಳಿಸುತ್ತಾರೆ. ಹಳೆ ಸಂಬಂಧದ ನೆನಪುಗಳ ಕುರಿತು ಅನೇಕ ಜನರು ತಮ್ಮ ಜೀವನದಲ್ಲಿ ವಿಫಲವಾದ ಪ್ರಣಯಗಳು ಹಾಗೂ ವಿಘಟನೆಗಳನ್ನು ಹೊಂದಿರುತ್ತಾರೆ. ಸಹಜವಾಗಿ ಒಬ್ಬರು ಅವುಗಳ ಬಗ್ಗೆ ಶಾಶ್ವತವಾಗಿ ಯೋಚಿಸಲು ಸಾಧ್ಯವಿಲ್ಲ. ಆದರೂ, ಆ ನೆನಪುಗಳು ಮತ್ತು ಆಲೋಚನೆಗಳನ್ನು ಮರೆತುಬಿಡುವುದು ಸುಲಭವಲ್ಲ. ಮದುವೆಯ ನಂತರವೂ, 'ಹಳೆ'ಯ ಆಲೋಚನೆಗಳು ಕೆಲವೊಮ್ಮೆ ಮತ್ತೆ ಉದ್ಭವಿಸಬಹುದು. ಮನಸ್ಸನ್ನು ಮುಳುಗಿಸಬಹುದು ಹಾಗೂ ಒಬ್ಬರ ಮನಸ್ಥಿತಿಯನ್ನು ಬದಲಾಯಿಸಬಹುದು ಎಂದು ತಜ್ಞರು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಜನರು ತಮ್ಮ ಸಂಗಾತಿಯ ಮೇಲೆ ತಮ್ಮ ಹತಾಶೆಯನ್ನು ಹೊರಹಾಕಬಹುದು ಇಲ್ಲವೇ ಮಾಜಿ ಸಂಗಾತಿಯ ಬಗ್ಗೆ ಪದೇ ಪದೇ ಮಾತನಾಡಬಹುದು ಮತ್ತು ಸುಳ್ಳು ಹೇಳುತ್ತಾ ಆ ವ್ಯಕ್ತಿ ಕೇವಲ ಸ್ನೇಹಿತ ಎಂದು ಹೇಳಿಕೊಳ್ಳಬಹುದು.

ಇಂತಹ ನಡವಳಿಕೆಯು ಸಂಗಾತಿಯಲ್ಲಿ ಅನಗತ್ಯ ಅನುಮಾನವನ್ನು ಹುಟ್ಟುಹಾಕುತ್ತದೆ. ಇದು ದಂಪತಿಗಳ ನಡುವೆ ಘರ್ಷಣೆಗೆ ಕಾರಣವಾಗಬಹುದು. ಅದಕ್ಕಾಗಿಯೇ ತಜ್ಞರು ಅಂತಹ ವಿಷಯಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು ದಂಪತಿಗಳ ನಡುವಿನ ಬಾಂಧವ್ಯವನ್ನು ಬಲಪಡಿಸುತ್ತದೆ ಎಂದು ತಜ್ಞರು ಸೂಚಿಸುತ್ತಾರೆ.

**ಹಣಕಾಸಿನ ವಿಷಯಗಳು:** ಪತಿ ಮತ್ತು ಪತ್ನಿಯ ನಡುವಿನ ಸಂಬಂಧದಲ್ಲಿ ಒತ್ತಡಕ್ಕೆ ಹಣಕಾಸಿನ ಸಮಸ್ಯೆಗಳು ಪ್ರಮುಖ ಕಾರಣಗಳಲ್ಲಿ ಸೇರಿವೆ. ನಿರ್ದಿಷ್ಟವಾಗಿ ಹೇಳುವುದಾದರೆ, ಪರಸ್ಪರ ಆದಾಯ ಮತ್ತು ಖರ್ಚುಗಳನ್ನು ಮರೆಮಾಡುವುದು ಇಲ್ಲವೇ ಮಿತವ್ಯಯಿ ಎಂದು ನಟಿಸುತ್ತಾ ಅಜಾಗರೂಕತೆಯಿಂದ ಖರ್ಚು ಮಾಡುವುದು ಸಮಸ್ಯಾತ್ಮಕವಾಗಬಹುದು. ಖಾಸಗಿಯಾಗಿ ಬೇರೆ ಏನನ್ನಾದರೂ ಮಾಡುವಾಗ ಬಾಹ್ಯವಾಗಿ ಒಂದು ರೀತಿಯಲ್ಲಿ ವರ್ತಿಸುವುದು. ಅಂತಿಮವಾಗಿ ಸಿಕ್ಕಿಬೀಳುವ ಅಪಾಯವನ್ನು ಹೊಂದಿರುತ್ತದೆ. ಇದು ನಂಬಿಕೆಯ ನಷ್ಟ ಮತ್ತು ಸಂಬಂಧದ ಕ್ರಮೇಣ ದುರ್ಬಲತೆಗೆ ಕಾರಣವಾಗಬಹುದು. ಆದ್ದರಿಂದ, ಆದಾಯ, ವೆಚ್ಚಗಳು, ಉಳಿತಾಯ ಮತ್ತು ಹೂಡಿಕೆಗಳ ಬಗ್ಗೆ ಪಾರದರ್ಶಕತೆ ಅತ್ಯಗತ್ಯವಾಗಿದೆ ಎಂದು ತಜ್ಞರು ತಿಳಿಸುತ್ತಾರೆ.

**ನಂಬಿಕೆ ಬೆಳೆಸುವುದು:** ಒಬ್ಬರ ವೃತ್ತಿ ಇಲ್ಲವೇ ಕೆಲಸದ ಬಗ್ಗೆ ಸುಳ್ಳು ಹೇಳುವುದರಿಂದ ಸಂಬಂಧದಲ್ಲಿ ಬಿರುಕುಗಳು ಉಂಟಾಗಬಹುದು. ಇದಲ್ಲದೆ, ಆರೋಗ್ಯ ಸಮಸ್ಯೆಗಳ ಬಗ್ಗೆ ನಿಮ್ಮ ಸಂಗಾತಿಗೆ ಸುಳ್ಳು ಹೇಳುವುದು ತಪ್ಪು. ನಿಮ್ಮ ಸಂಗಾತಿ ಸತ್ಯವನ್ನು ಕಂಡುಕೊಂಡರೆ, ಅದು ಅವರು ನಿಮ್ಮಲ್ಲಿರುವ ನಂಬಿಕೆಯನ್ನು ಸಂಪೂರ್ಣವಾಗಿ ನಾಶಪಡಿಸಬಹುದು. ಇಂತಹ ವಿಷಯಗಳಲ್ಲಿ ಜಾಗರೂಕರಾಗಿರುವುದು ಮುಖ್ಯ. ಕೊನೆಯದಾಗಿ ವೈವಾಹಿಕ ಸಂಬಂಧದ ಯಾವುದೇ ಅಂಶದಲ್ಲಿ ಗೌಪ್ಯತೆ ಅಥವಾ ಅಪ್ರಾಮಾಣಿಕತೆಯನ್ನು ತಪ್ಪಿಸುವುದು ಸಲಹೆಯಾಗಿದೆ. ಹಾಗೆ ಮಾಡುವುದರಿಂದ ಪರಸ್ಪರ ನಂಬಿಕೆ ಬೆಳೆಯುತ್ತದೆ. ಜೊತೆಗೆ ದಂಪತಿಗಳ ನಡುವಿನ ಬಾಂಧವ್ಯವನ್ನು ಬಲಪಡಿಸುತ್ತದೆ ಎಂದು ತಜ್ಞರು ಸಲಹೆ ನೀಡುತ್ತಾರೆ.

# ಪಠ್ಯಕ್ರಮದ ವಿಶ್ಲೇಷಣೆ: ಗೆಲುವಿನ ವೈಜ್ಞಾನಿಕ ಹೆಜ್ಜೆ



ವಿದ್ಯಾರ್ಥಿ ವಿಜಯ
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
6

ಪಠ್ಯಕ್ರಮವು ವಿದ್ಯಾರ್ಥಿಗಳ ಪಾಲಿಗೆ ದಾರಿದೀಪ. ಅದರ ಬೆಳಕಿನಲ್ಲಿ ನಡೆದರೆ ಕಲಿಕೆಯ ಪಯಣವು ಗೊಂದಲವಿಲ್ಲದ ಗುರಿಯಾಗುತ್ತದೆ.

ಏನು ಓದಬೇಕು,ಎಷ್ಟು ಓದಬೇಕು, ಹೇಗೆ ಓದಬೇಕು ಎಂಬುದನ್ನು ತೋರಿಸುವ ಸ್ಪಷ್ಟ ನಕ್ಷೆಯೇ ಪಠ್ಯಕ್ರಮ. ಮೊದಲು ವಿದ್ಯಾರ್ಥಿಗಳು ಪಠ್ಯಕ್ರಮವನ್ನು ಆಳವಾಗಿ ಅವಲೋಕಿಸಬೇಕು.

ವಿಜ್ಞಾನ ಹೇಳುತ್ತದೆ ಹಂತ ಹಂತದ ಅಧ್ಯಯನವು ಮೆದುಳಿನ ಸ್ಮರಣಶಕ್ತಿಯನ್ನು ಬಲಪಡಿಸುತ್ತದೆ. ಪುನರಾವರ್ತನೆ ಮತ್ತು ನಿರಂತರ ಅಭ್ಯಾಸವು ಜ್ಞಾನವನ್ನು ನೆನಪಿನಾಳದಲ್ಲಿ ಭದ್ರವಾಗಿ ನಿಲ್ಲಿಸುತ್ತದೆ.

ಪಠ್ಯಕ್ರಮಕ್ಕೆ ಅನುಗುಣವಾಗಿ ಸಮಯವನ್ನು ಹಂಚಿಕೊಂಡರೆ ಓದಿಗೂ ವಿಶ್ರಾಂತಿಗೂ ಸುಂದರ ಸಮತೋಲನ ಒದಗುತ್ತದೆ.

ಪಠ್ಯಕ್ರಮವನ್ನು ವಿಶ್ಲೇಷಿಸುವ ವಿದ್ಯಾರ್ಥಿಗಳು ದಾರಿ ತಪ್ಪದೆ ಗುರಿ ಮುಟ್ಟುತ್ತಾರೆ. ಪರೀಕ್ಷೆಯೆಂಬ ಕಣವನ್ನು ಎದೆಗುಂದದೆ ಎದುರಿಸುತ್ತಾರೆ.

ಆದ್ದರಿಂದ ಪಠ್ಯಕ್ರಮವೆಂಬ ದಿಕ್ಸೂಚಿಯನ್ನು ಕೈಯಲ್ಲಿ ಹಿಡಿದು,ಯೋಜನೆಯೆಂಬ ದೋಣಿಯಲ್ಲಿ ಪಯಣಿಸಿದರೆ, ಯಶಸ್ಸಿನ ದಡವು ವಿದ್ಯಾರ್ಥಿಗಳನ್ನು ಕೈಬೀಸಿ ಕರೆಯುತ್ತದೆ.

ವಿದ್ಯೆಯನ್ನು ಮೆದುಳಿನ ಸ್ಮರಣಶಕ್ತಿ ಬಲಪಡಿಸುತ್ತದೆ.

**ಸುಲಭ ಪಾಠದಿಂದ ಆರಂಭಿಸಿದರೆ ಮನಸ್ಸಿಗೆ ಹುರುಪು**

ಎಲ್ಲಾ ವಿಷಯಗಳನ್ನು ಸುಲಭ,ಮಧ್ಯಮ, ಕಠಿಣ ಎಂದು ಮೂರು ಗುಂಪಾಗಿ ವಿಂಗಡಿಸಿಕೊಳ್ಳಬೇಕು. ಸುಲಭ ಪಾಠದಿಂದ ಆರಂಭಿಸಿದರೆ ಮನಸ್ಸಿಗೆ ಹುರುಪು ಚಿಗುರುತ್ತದೆ, ಆತ್ಮವಿಶ್ವಾಸದ ರೆಕ್ಕೆಗಳು ಮೂಡುತ್ತವೆ. ಆ ಹುಮ್ಮಸ್ಸಿನಲ್ಲೇ ಕಠಿಣ ಪಾಠಗಳ ಶಿಖರವನ್ನೂ ಏರಬಹುದು. ಇದು ಒತ್ತಡವನ್ನು ಇಳಿಸುವ ಮನೋವೈಜ್ಞಾನಿಕ ಸೂತ್ರ.





ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

## ಕೆಂಪೇಗೌಡರ ಆದರ್ಶಗಳು: ಅಭಿವೃದ್ಧಿ ಮತ್ತು ಜವಾಬ್ದಾರಿಯ ಪಥ





ಒಂದು ರಾಜ್ಯದ ಅಭಿವೃದ್ಧಿ ಕೇವಲ ಸರ್ಕಾರದ ಯೋಜನೆಗಳಿಂದ ಮಾತ್ರ ಸಾಧ್ಯವಾಗುವುದಿಲ್ಲ. ಜನರ ಸಹಭಾಗಿತ್ವ, ಉತ್ತಮ ನಾಯಕತ್ವ ಮತ್ತು ದೂರದೃಷ್ಟಿಯ ಚಿಂತನೆ ಒಂದಾಗಿದಾಗ ಮಾತ್ರ ನಿಜವಾದ ಪ್ರಗತಿ ಸಾಧ್ಯ. ನಾಡಪ್ರಭು ಕೆಂಪೇಗೌಡರು ಸುಮಾರು ಐದು ಶತಮಾನಗಳ ಹಿಂದೆಯೇ ಈ ಸತ್ಯವನ್ನು ಅರಿತು, ತಮ್ಮ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳ ಮೂಲಕ ಅದನ್ನು ಸಾಕಾರಗೊಳಿಸಿದ್ದರು. ಅವರ ಆದರ್ಶಗಳು ಇಂದಿನ ಕರ್ನಾಟಕಕ್ಕೂ ಅಷ್ಟೇ ಪ್ರಸ್ತುತವಾಗಿವೆ.

ಇಂದು ಕರ್ನಾಟಕವು ತಂತ್ರಜ್ಞಾನ, ಶಿಕ್ಷಣ, ಕೈಗಾರಿಕೆ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ದೇಶದ ಪ್ರಮುಖ ರಾಜ್ಯವಾಗಿದೆ. ಆದರೆ ಈ ಬೆಳವಣಿಗೆಯ ಜೊತೆಗೆ ಪರಿಸರ ಸಂರಕ್ಷಣೆ, ನೀರಿನ ಅಭಾವ, ಸಂಚಾರ ದಟ್ಟಣೆ, ಮಾಲಿನ್ಯ ಮತ್ತು ನಗರ ಯೋಜನೆಯಂತಹ ಸವಾಲುಗಳೂ ಎದುರಾಗಿವೆ. ಈ ಸಂದರ್ಭದಲ್ಲಿ ಕೆಂಪೇಗೌಡರ ದೂರದೃಷ್ಟಿಯ ಆಡಳಿತ ಮತ್ತು ಪ್ರಕೃತಿ ಸ್ನೇಹಿ ಅಭಿವೃದ್ಧಿಯ ಮಾದರಿಯನ್ನು ಅನುಸರಿಸುವುದು ಕಾಲದ ಅಗತ್ಯವಾಗಿದೆ. ಇಂದಿನ ಯುವಜನತೆ ಕೆಂಪೇಗೌಡರ ಜೀವನದಿಂದ ನಾಯಕತ್ವ, ಸೇವಾ ಮನೋಭಾವ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಕಲಿಯಬೇಕು. ಸಮಾಜದ ಅಭಿವೃದ್ಧಿ ನಮ್ಮಿಂದಲೇ ಆರಂಭವಾಗಬೇಕು ಎಂಬ ಅರಿವು ಪ್ರತಿಯೊಬ್ಬ ನಾಗರಿಕನಲ್ಲೂ ಮೂಡಿದಾಗ ಮಾತ್ರ ಅವರ ಕನಸಿನ ಕರ್ನಾಟಕ ನಿರ್ಮಾಣ ಸಾಧ್ಯವಾಗುತ್ತದೆ. ಸಾರ್ವಜನಿಕ ಆಸ್ತಿಯ ರಕ್ಷಣೆ, ಪರಿಸರದ ಕಾಳಜಿ, ನೀರಿನ ಸಂರಕ್ಷಣೆ ಮತ್ತು ಕಾನೂನು ಪಾಲನೆ ಪ್ರತಿಯೊಬ್ಬರ ಕರ್ತವ್ಯವಾಗಬೇಕು.

ಕೆಂಪೇಗೌಡ ಜಯಂತಿಯನ್ನು ಆಚರಿಸುವುದು ಅವರ ಪ್ರತಿಮೆಗೆ ಹೂವಿನ ಹಾರ ಹಾಕುವುದಕ್ಕಿಂತಲೂ ಅವರ ಚಿಂತನೆಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವಾಗಬೇಕು.

ಅವರ ಆದರ್ಶಗಳನ್ನು ಅನುಸರಿಸುವ ಮೂಲಕ ಅಭಿವೃದ್ಧಿ, ಮಾನವೀಯತೆ ಮತ್ತು ಪರಿಸರ ಪ್ರಜ್ಞೆ ಒಂದಾಗಿರುವ ಕರ್ನಾಟಕವನ್ನು ಕಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾಡಪ್ರಭು ಕೆಂಪೇಗೌಡರ ಕನಸು ಶಾಶ್ವತವಾದ ಕರ್ನಾಟಕದ ನಿರ್ಮಾಣವಾಗಿತ್ತು. ಆ ಕನಸನ್ನು ನನಸಾಗಿಸುವ ಹೊಣೆಗಾರಿಕೆ ಇಂದಿನ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ. ಅವರ ಆದರ್ಶಗಳೇ ನಮ್ಮ ಭವಿಷ್ಯದ ಕರ್ನಾಟಕಕ್ಕೆ ನಿಜವಾದ ದಾರಿದೀಪ.

### ನೀರಿನ ಸಂರಕ್ಷಣೆ ಮತ್ತು ಕಾನೂನು ಪಾಲನೆ ಪ್ರತಿಯೊಬ್ಬರ ಕರ್ತವ್ಯವಾಗಬೇಕು


ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಕೇವಲ ಒಂದು ನಗರವಾಗಿರಲಿಲ್ಲ ಅದು ಯೋಜಿತ ಅಭಿವೃದ್ಧಿಯ ಪ್ರತೀಕವಾಗಿತ್ತು. ನಗರ ವಿಸ್ತರಣೆಯೊಂದಿಗೆ ಕೆರೆಗಳ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಕೃಷಿಗೆ ಪೂರಕವಾದ ಮೂಲಸೌಕರ್ಯ, ವ್ಯಾಪಾರಕ್ಕೆ ಅನುಕೂಲಕರ ವಾತಾವರಣ ಹಾಗೂ ಜನರ ಸುರಕ್ಷತೆಗೆ ಅವರು ನೀಡಿದ ಆದ್ಯತೆ ಅವರ ಆಡಳಿತದ ಗುಣಮಟ್ಟವನ್ನು ಎತ್ತಿ ತೋರಿಸುತ್ತದೆ. ಅಭಿವೃದ್ಧಿ ಮತ್ತು ಪರಿಸರದ ನಡುವೆ ಸಮತೋಲನ ಕಾಯ್ದುಕೊಳ್ಳುವ ಅಗತ್ಯವನ್ನು ಅವರು ತಮ್ಮ ಕಾರ್ಯಗಳ ಮೂಲಕ ಸಾರಿ ಹೇಳಿದ್ದರು.

## ಕ್ರೀಡಾಪಟುಗಳಿಗೆ ಯೋಗದ ಮಹತ್ವ



ಡಾ.ಈರಪ್ಪ ಲಕ್ಷ್ಮಣ ಘಸ್ತಿ.

ಯೋಗವು ದೇಹ,ಮನಸ್ಸು ಮತ್ತು ಆತ್ಮದ ಸಮತೋಲನವನ್ನು ಸಾಧಿಸುವ ಪ್ರಾಚೀನ ಭಾರತೀಯ ಪರಂಪರೆಯ ಅಭ್ಯಾಸವಾಗಿದೆ. ಇಂದಿನ ಸ್ಪರ್ಧಾತ್ಮಕ ಕ್ರೀಡಾ ಯುಗದಲ್ಲಿ ಕೇವಲ ದೈಹಿಕ ಶಕ್ತಿ, ವೇಗ ಅಥವಾ ತಂತ್ರಜ್ಞಾನ ಮಾತ್ರ ಸಾಕಾಗುವುದಿಲ್ಲ.ಕ್ರೀಡಾಪಟುಗಳಿಗೆ ಉತ್ತಮ ಏಕಾಗ್ರತೆ, ಮಾನಸಿಕ ಸ್ಥಿರತೆ, ಸಹನೆ ಮತ್ತು ಶಿಸ್ತು ಅತ್ಯಗತ್ಯ. ಈ ಎಲ್ಲಾ ಗುಣಗಳನ್ನು ಅಭಿವೃದ್ಧಿಪಡಿಸಲು ಯೋಗವು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ.ಕ್ರೀಡಾಪಟುಗಳಿಗೆ ಯೋಗಾಸನಗಳು ದೇಹದ ಲವಚಿಕತೆ ಮತ್ತು ಸ್ನಾಯು ಶಕ್ತಿಯನ್ನು ಹೆಚ್ಚಿಸುತ್ತವೆ. ಭುಜಂಗಾಸನ,ವೃಕ್ಷಾಸನ, ತ್ರಿಕೋಣಾಸನ, ವೀರಭದ್ರಾಸನ ಮತ್ತು ಸೂರ್ಯನಮಸ್ಕಾರಗಳಂತಹ ಆಸನಗಳು ದೇಹವನ್ನು ಚುರುಕುಗೊಳಿಸಿ, ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.



ಇದರಿಂದ ಸ್ನಾಯುಗಳು ಬಲಿಷ್ಠವಾಗುತ್ತವೆ ಹಾಗೂ ಗಾಯಗಳ ಸಂಭವವನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ವಿಶೇಷವಾಗಿ ಕ್ರೀಡೆಯಲ್ಲಿ ಗಾಯಗಳು ಸಾಮಾನ್ಯವಾಗಿರುವುದರಿಂದ ಯೋಗವು ಪುನಶ್ಚೇತನ ಪ್ರಕ್ರಿಯೆಯಲ್ಲಿಯೂ ಸಹಾಯಕವಾಗುತ್ತದೆ. ಪ್ರಾಣಾಯಾಮದಂತಹ ಉಸಿರಾಟ ಅಭ್ಯಾಸಗಳು ಕ್ರೀಡಾಪಟುಗಳಿಗೆ ಅತ್ಯಂತ ಉಪಯುಕ್ತವಾಗಿವೆ. ಇವು ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸಿ ದೇಹಕ್ಕೆ ಹೆಚ್ಚಿನ ಆಮ್ಲಜನಕ ಒದಗಿಸುತ್ತವೆ. ಇದರಿಂದ ದೈಹಿಕ ಸಹನಶಕ್ತಿ ಹೆಚ್ಚುತ್ತದೆ ಮತ್ತು ದೀರ್ಘಕಾಲದ ಆಟಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗುತ್ತದೆ. ಕಪಾಲಭಾತಿ, ಅನುಲೋಮ-ವಿಲೋಮ ಮತ್ತು ಭ್ರಮರಿ ಪ್ರಾಣಾಯಾಮಗಳು ಮನಸ್ಸಿನ ಶಾಂತಿಗೆ ಸಹಕಾರಿಯಾಗುತ್ತವೆ. ಮಾನಸಿಕವಾಗಿ ಯೋಗವು ಕ್ರೀಡಾಪಟುಗಳಿಗೆ ಒತ್ತಡ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸ್ಪರ್ಧೆಯ ಒತ್ತಡ, ಸೋಲಿನ ಭಯ ಮತ್ತು ಆತಂಕವನ್ನು ಧ್ಯಾನ ಮತ್ತು ಶ್ವಾಸಾಭ್ಯಾಸಗಳ ಮೂಲಕ ನಿಯಂತ್ರಿಸಬಹುದು. ಇದರಿಂದ ಕ್ರೀಡಾಪಟುಗಳು ಶಾಂತ ಮನಸ್ಸಿನಿಂದ ತೀರ್ಮಾನ ತೆಗೆದುಕೊಳ್ಳಲು ಮತ್ತು ತಮ್ಮ ಪ್ರದರ್ಶನವನ್ನು ಉತ್ತಮಗೊಳಿಸಲು ಸಾಧ್ಯವಾಗುತ್ತದೆ. ಧ್ಯಾನವು ಏಕಾಗ್ರತೆಯನ್ನು ಹೆಚ್ಚಿಸುವುದರಿಂದ ಆಟದ ವೇಳೆ ಗಮನಚಲನೆ ಕಡಿಮೆಯಾಗುತ್ತದೆ. ಇನ್ನೂ ಮುಖ್ಯವಾಗಿ,ಯೋಗವು ಶಿಸ್ತುಬದ್ಧ ಜೀವನಶೈಲಿಯನ್ನು ರೂಪಿಸಲು ಸಹಾಯ ಮಾಡುತ್ತದೆ.

ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ನಿಯಮಿತತೆ, ಆತ್ಮನಿಯಂತ್ರಣ ಮತ್ತು ಧೈರ್ಯ ಹೆಚ್ಚುತ್ತದೆ. ಇದು ಕ್ರೀಡಾಪಟುಗಳ ಒಟ್ಟಾರೆ ವ್ಯಕ್ತಿತ್ವ ವಿಕಾಸಕ್ಕೂ ಸಹಾಯಕವಾಗುತ್ತದೆ. ಒಟ್ಟಾರೆಯಾಗಿ,ಯೋಗವು ಕ್ರೀಡಾಪಟುಗಳಿಗೆ ದೈಹಿಕ ಶಕ್ತಿ ಮಾತ್ರವಲ್ಲ, ಮಾನಸಿಕ ಸಮತೋಲನ ಮತ್ತು ಆತ್ಮವಿಶ್ವಾಸವನ್ನು ನೀಡುವ ಶಕ್ತಿಶಾಲಿ ಸಾಧನವಾಗಿದೆ. ಆದ್ದರಿಂದ ಯೋಗವನ್ನು ಕ್ರೀಡಾ ತರಬೇತಿಯ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.



ಲೇಖಕರು
ಚನ್ನೇಗೌಡ ಉಜ್ಜನಿ ಚಲುವಯ್ಯ
ಲೇಖಕರು
ಕನ್ನಡ ಪರ ಚಿಂತಕರು

# ಸರ್ವ ಧರ್ಮದ ಹಿತಚಿಂತಕ ನಾಡಪ್ರಭು ಕೆಂಪೇಗೌಡರು

ಕೆಂಪೇಗೌಡರ ಆಡಳಿತದಲ್ಲಿ ವ್ಯಾಪಾರ ಮತ್ತು ವಾಣಿಜ್ಯಕ್ಕೂ ವಿಶೇಷ ಪ್ರೋತ್ಸಾಹ ದೊರೆಯಿತು. ವಿವಿಧ ಪ್ರದೇಶಗಳಿಂದ ವ್ಯಾಪಾರಿಗಳು ಬೆಂಗಳೂರಿಗೆ ಆಗಮಿಸುವಂತೆ ಅವಕಾಶ ಕಲ್ಪಿಸಲಾಯಿತು. ಇದರಿಂದ ನಗರ ಆರ್ಥಿಕವಾಗಿ ಬೃಹತ್ತಾಗಿ ಬೆಳೆಯಿತು. ಒಂದು ನಗರ ಅಭಿವೃದ್ಧಿಯಾಗಬೇಕಾದರೆ ಉದ್ಯೋಗ ಮತ್ತು ವ್ಯಾಪಾರದ ಅವಕಾಶಗಳು ಅಗತ್ಯ ಎಂಬ ಸತ್ಯವನ್ನು ಅವರು ಅರ್ಥಮಾಡಿಕೊಂಡಿದ್ದರು. ಬೆಂಗಳೂರು ನಗರ ಸ್ಥಾಪನೆಗೆ 1537ರಲ್ಲೇ ನಾಂದಿ ಹಾಡಿ, ವಿಶ್ವದ ಅದ್ಭುತ ನಗರವನ್ನು ನಿರ್ಮಾಣ ಮಾಡಿ, ಸರ್ವರಿಗೂ ಸೂರು, ಉದ್ಯೋಗ, ಅವಕಾಶ ಕಲ್ಪಿಸಿ ಮಾದರಿ ದೊರೆಯಾಗಿ ಸೇವೆ ಸಲ್ಲಿಸಿದ್ದಾರೆ.

ನಾಡಪ್ರಭು ಕೆಂಪನಂಜೇಗೌಡ ಹಾಗೂ ಲಿಂಗಾಂಬೆ ದಂಪತಿಗಳಿಗೆ 1510ರಲ್ಲಿ ಯಲಹಂಕದಲ್ಲಿ ಜನಿಸಿದ ಮೊದಲನೆಯ ಕೆಂಪೇ ಗೌಡರು.

ಕುಲದೇವತೆಯಾದ ಕೆಂಪಮ್ಮ ಹಾಗೂ ಭೈರವ ದೇವರ ಅನುಗ್ರಹದಿಂದ ಜನಿಸಿದ ಕಾರಣ ಕೆಂಪನಂಜೇಗೌಡ ದಂಪತಿಗಳು ಮಗುವಿಗೆ ಕೆಂಪ, ಕೆಂಪಯ್ಯ, ಎಂಬ ಹೆಸರಿನಿಂದ ಕರೆಯುತ್ತಿದ್ದರು.ಯಲಹಂಕ ನಾಡಪ್ರಭುವಾಗಿ ಮುಪ್ಪಿನಲ್ಲಿದ್ದ ಕೆಂಪನಂಜೇಗೌಡರು ಮಗನಿಗೆ ರಾಜ್ಯವಾಳುವ ಎಲ್ಲಾ ಅರ್ಹತೆಯಿದೆಯೆಂದು ತಿಳಿದು ಮಗ ಕೆಂಪೇಗೌಡರಿಗೆ 1531ರಲ್ಲಿ ನಾಡಪ್ರಭುಗಳ ಅಧಿಕಾರ ವಹಿಸಿಕೊಡುತ್ತಾರೆ. ವಿಜಯನಗರದ ಅರಸರು ಹಿಂದಿನಿಂದಲೂ ತಮ್ಮ ವಂಶಸ್ಥರ ಮೇಲಿಟ್ಟಿದ್ದ ನಂಬಿಕೆಗೆ ಚ್ಯುತಿ ಬಾರದಂತೆ ನಡೆದು ಕೊಳ್ಳುವ ಕೆಂಪೇಗೌಡರು ಉಳಿದ ಸಾಮಂತರಂತೆ ಸ್ವತಂತ್ರರಾಗಲೊಪ್ಪುವುದಿಲ್ಲ. ಬದಲಿಗೆ ವಿಜಯ ನಗರ ಸಾಮ್ರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ಮುಂದುವರೆಸುತ್ತಾರೆ.ವಿಜಯನಗರ ಸಾಮಂತರು ಹಾಗೂ ಪಾಳೇಗಾರರಲ್ಲಿ ನಾಡಪ್ರಭು ಕೆಂಪೇ ಗೌಡರ ಸೇವೆ ಬಹಳ ಪ್ರಮುಖ. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾದ 1565ರಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ತಮ್ಮ ಸೈನ್ಯ ಸಮೇತ ಹೋರಾಟ ಮಾಡಿದ್ದು ಇತಿಹಾಸದ ಪುಟದಲ್ಲಿ ಉಳಿದಿದೆ.

ಇವರ ಆಳ್ವಿಕೆ ಆಂಧ್ರದ ಹಲವು ಗಡಿ ಭಾಗಗಳು ಹಾಗೂ ತಮಿಳುನಾಡಿನ ಡೆಂಕಣಿಕೋಟೆಯವರೆಗೆ ಸ್ವತಂತ್ರ ಸಾಮಂತನಾಗಿ ಸೇವೆ ಸಲ್ಲಿಸಿದ್ದು, ಇವರ ನಾಯಕತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.ನಮ್ಮ ಗ್ರೇಟರ್ ಬೆಂಗಳೂರು ಇಂದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದ್ದು, ಐಟಿ-ಬಿಟಿ ಕಂಪನಿಗಳ ತವರೆನಿಸಿಕೊಂಡಿದೆ. ಬೆಂಗಳೂರು ಕೆಂಪೇಗೌಡರ ಕಾಲದಲ್ಲೂ ವಾಣಿಜ್ಯ ಕೇಂದ್ರವಾಗಿತ್ತು. ವೃತ್ತಿಯ ಆಧಾರದ ಹೆಸರಿನಲ್ಲಿಸುಮಾರು 54 ಪೇಟೆಗಳು ಅರಳೇಪೇಟೆ, ಅಕ್ಕಿಪೇಟೆ, ಕುಂಬಾರಪೇಟೆ, ರಾಗಿಪೇಟೆ, ಗಾಣಿಗರಪೇಟೆ, ಗೊಲ್ಲರಪೇಟೆ, ಮಡಿವಾಳ ಪೇಟೆ, ಮಂಡಿ ಪೇಟೆ, ಬಳೇಪೇಟೆ, ಅಂಚೆಪೇಟೆ, ಹಳೇತರುಗುಪೇಟೆ, ಹೊಸತರುಗು ಪೇಟೆ, ಸುಣಕಲ್ಪಟೆ, ಕುರುಬರಪೇಟೆ, ಕುಂಚಟಿಗರ ಪೇಟೆ, ಮುತ್ಯಾಲಪೇಟೆ, ದೊಡ್ಡ ಪೇಟೆ, ಚಿಕ್ಕಪೇಟೆ, ಉಪ್ಪಾರಪೇಟೆ, ಹತ್ತಿಪೇಟೆ, ತಾರಾಮಂಡಲಪೇಟೆ, ದರ್ಜಿಪೇಟೆ, ಕಲಾರ ಪೇಟೆ, ಮೇದಾರಪೇಟೆ, ಹಳೆ ಪಟ್ಟೂಲು ಪೇಟೆ ಗಳು ನಗರದ ಜೀವನಾಡಿಯಾಗಿದ್ದವು.

ದೊಡ್ಡ ಪೇಟೆ ರಾಜಕಾರಣಕ್ಕೆ, ಚಿಕ್ಕಪೇಟೆ ವ್ಯಾಪಾರಕ್ಕೆ

**ಕೆಂಪೇಗೌಡರ ಕಾಲದಲ್ಲಿ ನಗರ ನಿರ್ಮಾಣ ಮತ್ತು ಪರಿಸರ ಸಂರಕ್ಷಣೆ, ಕೆರೆಗಳು, ಉದ್ಯಾನಗಳು, ಕೃಷಿಭೂಮಿಗಳು ಮತ್ತು ವಸತಿ ಪ್ರದೇಶಗಳ ನಡುವೆ ಸಮತೋಲನ ಇತ್ತು. ಸದ್ಯದ ಪರಿಸ್ಥಿತಿ ನೋಡಿದರೆ ಕಾಂಕ್ರೀಟ್ ಕಾಡುಗಳ ನಡುವೆ ಪ್ರಕೃತಿಗೆ ಸ್ಥಳ ದಿನೇ ದಿನೇ ಕಡಿಮೆಯಾಗುತ್ತಿದೆ. ಪರಿಣಾಮವಾಗಿ ನಗರವು ಉಷ್ಣತೆ, ನೀರಿನ ಕೊರತೆ ಮತ್ತು ಪ್ರವಾಹದಂತಹ ಸಮಸ್ಯೆಗಳನ್ನು ನೋಡುತ್ತಿದ್ದೇವೆ. ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಕೈಗಾರಿಕೆ ಮತ್ತು ಉದ್ಯೋಗಾವಕಾಶಗಳ ಕೇಂದ್ರವಾಗಿ ಗುರುತಿಸಿಕೊಂಡಿರುವ ನಮ್ಮ ಬೆಂಗಳೂರು ನಗರಕ್ಕೆ ಭದ್ರ ಬುನಾದಿ ಹಾಕಿದವರು ನಾಡಪ್ರಭು ಕೆಂಪೇಗೌಡರು.**

**ಸುಮಾರು ಐದು ಶತಮಾನಗಳ ಹಿಂದೆ ಅವರು ಕಂಡ ಕನಸು ಮತ್ತು ರೂಪಿಸಿದ ನಗರ ಯೋಜನೆ ಇಂದಿಗೂ ಅಚ್ಚರಿಯನ್ನುಂಟು ಮಾಡುತ್ತದೆ. ಆಧುನಿಕ ನಗರ ಯೋಜನೆಯ ಪರಿಕಲ್ಪನೆಗಳೇ ಇಲ್ಲದ ಕಾಲದಲ್ಲಿ ಅವರು ರೂಪಿಸಿದ ಬೆಂಗಳೂರಿನ ವಿನ್ಯಾಸ, ಅವರ ದೂರದೃಷ್ಟಿ ಮತ್ತು ಆಡಳಿತ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಯಲಹಂಕ ನಾಡಪ್ರಭುಗಳ ವಂಶದ ದೂರದೃಷ್ಟಿಯ ಮತ್ತು ಮೇಧಾವಿ ದೊರೆ ಶ್ರೀ ಕೆಂಪೇಗೌಡರು ಪರಹಿತ ಚಿಂತಕರಾಗಿದ್ದವರು.**



ಸೀಮಿತವಾಗಿತ್ತು. ಎಲ್ಲಾ ಜಾತಿ, ಸಮುದಾಯದವರಿಗೆ ನೆಲೆ ಕಲ್ಪಿಸಿಕೊಟ್ಟ ಅವರ ಸರ್ವಧರ್ಮ ಸಹಿಷ್ಣುತೆಯು ಪ್ರಜೆಗಳ ಮನಗೆದ್ದಿತ್ತು. ನಗರಕ್ಕೆ ನದಿಯ ಮೂಲಗಳಿರಲಿಲ್ಲದ ಅಂದಿನ ದಿನದಲ್ಲಿಯೇ ಕೃಷಿ ಮತ್ತು ಕುಡಿಯುವ ನೀರಿಗಾಗಿ ಧರ್ಮಾಂಬುಧಿ ಕೆರೆ, ಕೆಂಪಾಂಬುಧಿ ಕೆರೆ, ಹಲಸೂರು, ಸಂಪಂಗಿ ಕೆರೆ, ಕಾರಂಜಿ ಕೆರೆ, ಸಿದ್ಧಿಕಟ್ಟೆ, ಕೆಂಪಾಪುರ ಅಗ್ರಹಾರ ಕೆರೆ, ಜಕ್ಕರಾಯನಕೆರೆ ಸೇರಿದಂತೆ ನೂರಾರು ಕೆರೆ-ಕುಂಟೆ, ಕಲ್ಯಾಣಿಗಳನ್ನು ನಿರ್ಮಿಸಿದ್ದರು. ಅವರ ಕಾಲದಲ್ಲಿ 347 ದೊಡ್ಡ ಕೆರೆಗಳು, 1200ಕ್ಕೂ ಅಧಿಕ ಸಣ್ಣ ಕೆರೆ-ಕಟ್ಟೆಗಳಿದ್ದವು ಎಂಬ ಮಾಹಿತಿಯನ್ನು ತಿಳಿದಿದ್ದೇವೆ. ದೇವರ ಬಗ್ಗೆ ಅಪಾರ ಪ್ರೀತಿ ಗೌರವ ಹೊಂದಿದ್ದ ಕೆಂಪೇಗೌಡರು ಹಲಸೂರಿನ ಸೋಮೇಶ್ವರ, ಗವಿಪುರದ ಗವಿಗಂಗಾಧರೇಶ್ವರ, ಕಾಡು ಮಲ್ಲೇಶ್ವರ, ದೊಡ್ಡ ಗಣಪತಿ, ಧರ್ಮರಾಯಸ್ವಾಮಿ ದೇವಾಲಯಗಳನ್ನು ನಿರ್ಮಿಸಿ ತಮ್ಮ ನಿಜವಾದ ಭಕ್ತಿಯನ್ನು ತೋರ್ಪಡಿಸಿದ್ದರು. ದೇವರಸಗೌಡನ ಕಾಲಕ್ಕೆ ಹೆಸರು ಮಾಡಿದ್ದ ಶಿವಗಂಗೆಯ ಬೆಟ್ಟದ ಮೇಲಿಂದ ಹೊಯ್ಸಳ ದೊರೆ ಬಿಟ್ಟಿದೇವನ (ವಿಷ್ಣುವರ್ಧನ) ಪತ್ನಿ ಶಾಂತಲೆಯು ಬಿದ್ದಳೆಂಬ ಐತಿಹ್ಯವಿದೆ.

ಆದರೂ ಆಗಿನ ಕಾಲದಲ್ಲಿ ಬೆಟ್ಟವನ್ನೇರುವುದು ಬಹಳ ಪ್ರಯಾಸಕರವಾಗಿತ್ತು. 1550ರಲ್ಲಿ ಕೆಂಪೇಗೌಡರು ಶಿವಗಂಗೆಯನ್ನು ವಶಪಡಿಸಿಕೊಳ್ಳುತ್ತಾರೆ. ಇಲ್ಲಿನ ಕುಂದುಕೊರತೆ ಗಳತ್ತ ಗಮನ ಹರಿಸುವ ಗೌಡರು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಕೆಂಪೇಗೌಡರ ಪುತ್ರರಾದಿಯಾಗಿ ಸುಮಾರು 2000ದಷ್ಟು ಸೈನಿಕರು ವಿಜಯನಗರದ ಪರವಾಗಿ ತಾಳಿಕೋಟೆಯ ಯುದ್ಧದಲ್ಲಿ ಭಾಗವಹಿಸಿದ್ದರು ಎಂದು ಹೇಳಲಾಗುತ್ತದೆ. ಆದರೆ, ವಿಜಯನಗರವು ಡಖನ್‌ನ ಸುಲ್ತಾನರಿಂದ ನಿರ್ನಾಮವಾಗಿದ್ದು ಜತೆಗೆ ಬಂಧುಗಳು, ಸೈನಿಕರು ಈ ಯುದ್ಧದಲ್ಲಿ ಸಾವನ್ನಪ್ಪಿದ್ದು ಕೆಂಪೇ ಗೌಡರ ಮನಸ್ಸಿನಲ್ಲಿ ಅಳಿಸಲಾರದ ನೋವನ್ನುಂಟುಮಾಡುತ್ತದೆ. ಕೆಂಪೇಗೌಡರು ಸರ್ವ ಧರ್ಮ, ಜಾತಿಯವರನ್ನು ಸಮಭಾವದಿಂದ ಕಂಡ ಧೀಮಂತ ಆಡಳಿತಗಾರರು, ಕುವೆಂಪುರ ವರು ಹೇಳಿದಂತೆ ಈ ಸಮೃದ್ಧ ನೆಲವನ್ನು ಸರ್ವ ಜನಾಂಗದ ಶಾಂತಿಯ ತೋಟದಂತೆ ನಿರ್ಮಾಣ ಮಾಡಿ, ಉದ್ಯೋಗ, ಅವಕಾಶ ಕಲ್ಪಿಸುವ ಪ್ರಪಂಚದ ಮೆಚ್ಚಿನ ನಗರ ವಾಗಿ ಮಾಡಿದ ಕೀರ್ತಿ ಧರ್ಮಾರ್ಥ ಕೆಂಪೇಗೌಡರಿಗೆ ಸಲ್ಲುತ್ತದೆ.ಕೆಂಪೇಗೌಡರು ಕೇವಲ ಕೋಟೆ ನಿರ್ಮಿಸಿದ ಆಡಳಿತಗಾರರಲ್ಲ. ಜನರ ಜೀವನ, ವ್ಯಾಪಾರ, ಕೃಷಿ, ನೀರಿನ ವ್ಯವಸ್ಥೆ ಮತ್ತು ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ನಗರವನ್ನು ರೂಪಿಸಿದ ಮಹಾನ್ ನಗರ ನಿರ್ಮಾತೃ. ನಗರದ ಅಭಿವೃದ್ಧಿ ಅಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲ ಜನರ ಅಗತ್ಯಗಳಿಗೆ ಅನುಗುಣವಾದ ವ್ಯವಸ್ಥೆಗಳನ್ನು ಕಲ್ಪಿಸುವುದು ಅವರ ಚಿಂತನೆಯಾಗಿತ್ತು.ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿ ಕೋಟೆಯನ್ನು ನಿರ್ಮಿಸಿದ ಅವರು ಅದರ ಸುತ್ತ ಮಾರುಕಟ್ಟೆಗಳು, ದೇವಾಲಯಗಳು, ವಸತಿ ಪ್ರದೇಶಗಳು ಮತ್ತು ಕೆರೆಗಳನ್ನು ಅಭಿವೃದ್ಧಿಪಡಿಸಿದರು. ಜನರು ಸುಲಭವಾಗಿ ಬದುಕಲು ಮತ್ತು ವ್ಯಾಪಾರ ನಡೆಸಲು ಅನುಕೂಲವಾಗುವಂತೆ ನಗರವನ್ನು ವಿನ್ಯಾಸಗೊಳಿಸಿದರು. ಇಂದಿನ ನಗರ ಯೋಜನೆಯಲ್ಲಿ ಮಹತ್ವ ಪಡೆಯುವ ಮೂಲಸೌಕರ್ಯಗಳ ಚಿಂತನೆ ಅಂದೇ ಅವರ ಆಡಳಿತದಲ್ಲಿ ಕಂಡುಬರುತ್ತದೆ.ನಗರದ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು ಅವರು ನಿರ್ಮಿಸಿದ ನಾಲ್ಕು ಗೋಪುರಗಳು ವಿಶೇಷ ಮಹತ್ವ ಹೊಂದಿವೆ. ಭವಿಷ್ಯದಲ್ಲಿ ಬೆಂಗಳೂರು ಈ ಗಡಿಗಳನ್ನು ಮೀರಿ ಬೆಳೆಯಲಿದೆ ಎಂಬ ದೂರದೃಷ್ಟಿಯಿಂದ ಅವುಗಳನ್ನು ನಿರ್ಮಿಸಲಾಗಿದೆ ಎಂಬ ನಂಬಿಕೆ ಇದೆ. ಇಂದು ಬೆಂಗಳೂರು ಆ ಗೋಪುರಗಳ ಗಡಿಗಳನ್ನು ಬಹಳ ಹಿಂದೆಯೇ ದಾಟಿ ಜಾಗತಿಕ ನಗರವಾಗಿ ಬೆಳೆದಿದೆ.

ಇದು ಕೆಂಪೇಗೌಡರ ದೂರದೃಷ್ಟಿಯ ಮಹತ್ವವನ್ನು ಮತ್ತೊಮ್ಮೆ ಸಾಬೀತುಪಡಿಸುತ್ತದೆ. ಪ್ರಸ್ತುತ ನೋಡಿದಾಗ ಯೋಜನಾರಹಿತ ವಿಸ್ತರಣೆ, ಸಂಚಾರ ದಟ್ಟಣೆ, ನೀರಿನ ಸಮಸ್ಯೆ, ಪರಿಸರ ಮಾಲಿನ್ಯ ಮತ್ತು ಹಸಿರು ಪ್ರದೇಶಗಳ ನಾಶಮಾಡುತ್ತಿರುವುದು ನಗರ ಜೀವನಕ್ಕೆ ಸವಾಲಾಗಿವೆ. ಅಭಿವೃದ್ಧಿಯ ವೇಗ ಹೆಚ್ಚಿದರೂ ಅದರ ಯೋಜನೆ ಮತ್ತು ನಿರ್ವಹಣೆ ಸಮರ್ಪಕವಾಗಿಲ್ಲ ಎನ್ನಬಹುದು.

ಪರಿಸರ, ಮೂಲಸೌಕರ್ಯ ಮತ್ತು ಜನಸಂಖ್ಯೆಯ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಿದಾಗ ಮಾತ್ರ ನಗರಗಳು ಸುಸ್ಥಿರವಾಗಿ ಬೆಳೆಯಲು ಸಾಧ್ಯವಾಗುತ್ತದೆ.ಈ ನೆಲದಲ್ಲಿ ಸಾರ್ವಜನಿಕ ಆಸ್ತಿಗಳ ಸಂರಕ್ಷಣೆ, ಪರಿಸರ ಕಾಳಜಿ ಮತ್ತು ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಉತ್ತಮ ನಗರದ ನಿರ್ಮಾಣಕ್ಕೆ ಅಗತ್ಯವಾಗಿದೆ.


ಈ ನಗರ ನಮ್ಮದು ಎಂಬ ಭಾವನೆಯೊಂದಿಗೆ ಪ್ರತಿಯೊಬ್ಬರೂ ನಡೆದುಕೊಂಡಾಗ ಮಾತ್ರ ಅಭಿವೃದ್ಧಿಯ ಫಲ ಎಲ್ಲರಿಗೂ ತಲುಪಲು ಸಾಧ್ಯವಾಗುತ್ತದೆ. ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಕೇವಲ ಇಟ್ಟಿಗೆ ಮತ್ತು ಕಲ್ಲುಗಳಿಂದ ನಿರ್ಮಿತವಾದ ನಗರವಲ್ಲ ಅದು ಅವರು ಕಂಡ ಸುಂದರ ಕನಸು, ಒಂದು ದೃಷ್ಟಿಕೋನ ಮತ್ತು ಒಂದು ದೂರದರ್ಶಿ ಚಿಂತನೆಯ ಫಲ. ಇಂದು ನಾವು ಎದುರಿಸುತ್ತಿರುವ ನಗರ ಸಮಸ್ಯೆಗಳಿಗೆ ಪರಿಹಾರ ಹುಡುಕುವಾಗ ಅವರ ನಗರ ನಿರ್ಮಾಣದ ತತ್ವಗಳನ್ನು ಪುನಃ ಮಕ್ಕಳ ಪಠ್ಯ ಪುಸ್ತಕಗಳಲ್ಲಿ ತಿಳುಸುವ ಕಾರ್ಯ ಚುರುಕು ಗೊಳ್ಳಬೇಕಿದೆ, ಹಾಗೂ ಅವರ ಬಗ್ಗೆ ಅಧ್ಯಯನ ನಡೆಯಬೇಕಿದೆ.

# ಅನಧಿಕೃತವಾಗಿ ತಲೆ ಎತ್ತಿ ನಿಂತಿರುವ ಕೋಚಿಂಗ್ ಸೆಂಟರ್ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಿ

• ಉದಯವಾಹಿನಿ ಔರಾದ್ :

ಪಟ್ಟಣ ಸೇರಿದಂತೆ ತಾಲ್ಲೂಕಿನ ಹಲವೆಡೆ ಅನಧಿಕೃತ ಕೋಚಿಂಗ್ ಸೆಂಟರ್ ಗಳ ಹಾವಳಿ ಹೆಚ್ಚಾಗಿದ್ದು, ಇದು ಶಾಲೆಗಳ ಕಾರ್ಯ ಚಟುವಟಿಕೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ ಅನಧಿಕೃತ ಕೋಚಿಂಗ್ ಸೆಂಟರಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘದ ಸದಸ್ಯರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದಲ್ಲಿ ಹಾಗೂ ನಾನಾ ಕಡೆ ತಲೆ ಎತ್ತಿ ನಿಂತಿರುವ ಕೋಚಿಂಗ್ ಸೆಂಟರ್‌ಗಳು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟ ಆಡುತ್ತಿವೆ, ಇದರಿಂದ ವಿದ್ಯಾರ್ಥಿಗಳು ವಿಷಯಾಧಾರಿತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶಿಕ್ಷಣ ಇಲಾಖೆಯ ಪರವಾನಗಿ ಪಡೆಯದೆ ಕಾರ್ಯನಿರ್ವಹಿಸುತ್ತಿವೆ, ಅಂತಹ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣವಾಗಿ ನಿಲ್ಲಿಸಿ ಅವುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಮೂರು ದಿವಸಗಳ ಒಳಗೆ ಕ್ರಮ ಕೈಗೊಳ್ಳದಿದ್ದರೆ ಬಿಇಒ ಕಚೇರಿ ಮುಂದೆ ಅನಿರ್ದಿಷ್ಟವಾದಿ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಸಂಘದ ತಾಲ್ಲೂಕು ಅಧ್ಯಕ್ಷ ಗುರುನಾಥ ದೇಶಮುಖ, ಉಪಾಧ್ಯಕ್ಷ ಸೂರ್ಯಕಾಂತ ಬಿರಾದರ್, ಕಾರ್ಯದರ್ಶಿ ಕೃಷ್ಣ ಪಾಟೀಲ್, ಜೈವಂತ ಉಜನಿ, ನಾಗಸೇನ ತಾರೆ, ರಾಜಕುಮಾರ ಹಂಬಲಪುರೆ, ಬಾಲಾಜಿ ಫಿರಂಗೆ, ಸಂಜು ಮುಧೋಳ್, ಸಂಜು ಕಂತಾಳೆ, ಭೀಮಶಂಕರ ಜೇರ್ಗೆ, ಬಸವರಾಜ ಅಣದುರೆ, ಸುಶೀಲ ಕುಮಾರ ಇದ್ದರು.

# ಎಸ್‌ಸಿ-ಎಸ್‌ಟಿ ಹಬ್ ಯೋಜನೆಗಳ ಸದುಪಯೋಗವಾಗಲಿ

## ಡಾ. ಬಿ.ಆರ್. ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾಗಿ ಎಸ್‌ಸಿ-ಎಸ್‌ಟಿ ಸಮುದಾಯಗಳಿಗೆ ಶಿಕ್ಷಣ, ಉದ್ಯೋಗ

• ಉದಯವಾಹಿನಿ ಅಥಣಿ :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕರು ಉದ್ಯೋಗ ಪಡೆಯಲು ಹಾತೊರೆಯದೇ ಉದ್ಯೋಗ ಸೃಷ್ಟಿಸುವವರಾಗಬೇಕು.ತಳ ಸಮುದಾಯಗಳು ಸ್ವಾವಲಂಬಿ ಬದುಕು ಕಟ್ಟಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಉದ್ಯಮಶೀಲತೆಯನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು

**1 : ಉದ್ಯಮಿಗಳಾಗಿ ಬೆಳೆಯುವ ಉದ್ದೇಶ**
**2 : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ**
**3 : 10 ಕೋಟಿವರೆಗೆ ಸಾಲ ಸೌಲಭ್ಯವೂ ಲಭ್ಯವಿದೆ**

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸಲಹೆ ನೀಡಿದರು. ಪಟ್ಟಣದ ಆರ್.ಎಚ್. ಕುಲಕರ್ಣಿ ಭವನದಲ್ಲಿ ಎಸ್‌ಸಿ-ಎಸ್‌ಟಿ ಹಬ್, ಎಂಎಸ್ ಎಂಇ ಹಾಗೂ ಅಖಿಲ ಕರ್ನಾಟಕ ಚರ್ಮಕಾರ ಸಮಾಜ ಮಹಾ ಒಕ್ಕೂಟ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರಿಗೆ ಹಾಗೂ ಸಣ್ಣ ಉದ್ಯಮಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಸಾಲ ಯೋಜನೆಗಳನ್ನು ರೂಪಿಸಿದ್ದು, ಕೆಲ ಯೋಜನೆಗಳಲ್ಲಿ 10 ಕೋಟಿವರೆಗೆ ಸಾಲ ಸೌಲಭ್ಯವೂ ಲಭ್ಯವಿದೆ. ಈ ಅವಕಾಶಗಳನ್ನು ಆ ಸಮುದಾಯದ ಜನರು ಸದುಪಯೋಗಪಡಿಸಿಕೊಂಡು ತಮ್ಮ ಉದ್ಯಮಗಳನ್ನು ವಿಸ್ತರಿಸಿಕೊಳ್ಳಬೇಕು ಎಂಎಸ್ ಎಂಇ ನೋಂದಣಿ ಮಾಡಿಕೊಂಡು ಪ್ರಮಾಣಪತ್ರ ಪಡೆದವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆದು ಉದ್ಯಮಿಗಳಾಗಿ ಬೆಳೆಯಬೇಕು. ಎಂದು ಕರೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾಗಿ ಎಸ್‌ಸಿ-ಎಸ್‌ಟಿ ಸಮುದಾಯಗಳಿಗೆ ಶಿಕ್ಷಣ, ಉದ್ಯೋಗ ಹಾಗೂ ಆರ್ಥಿಕ ಅಭಿವೃದ್ಧಿಯ ಅನೇಕ ಅವಕಾಶಗಳು ದೊರೆತಿವೆ. ಆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಗಟ್ಟಿಯಾದ ಸ್ಥಾನಮಾನ ಗಳಿಸಬೇಕು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

> ಉದ್ಯಮಶೀಲತೆಯಲ್ಲಿ ಯಶಸ್ಸು ಸಾಧಿಸಲು ಎಂಎಸ್‌ಎಂಇ ಪ್ರಮಾಣಪತ್ರ ಅತ್ಯಗತ್ಯವಾಗಿದೆ. ಇದರ ಮೂಲಕ ವಿವಿಧ ಯೋಜನೆಗಳು, ಸಬ್ಸಿಡಿಗಳು ಹಾಗೂ ಸಾಲ ಸೌಲಭ್ಯಗಳನ್ನು ಪಡೆಯಬಹುದು. ಬ್ಯಾಂಕುಗಳೊಂದಿಗೆ ಉತ್ತಮ ವ್ಯವಹಾರಿಕ ಸಂಬಂಧ ಹೊಂದಿ, ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿಸುವ ಮೂಲಕ ಹೆಚ್ಚಿನ ಆರ್ಥಿಕ ನೆರವು ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.
> - ವ್ಯವಸ್ಥಾಪಕ ಪ್ರಶಾಂತ ಗೋಡಕೆ

ಅಖಿಲ ಕರ್ನಾಟಕ ಚರ್ಮಕಾರ ಸಮಾಜ ಮಹಾ ಒಕ್ಕೂಟದ ಅಧ್ಯಕ್ಷ ಡಾ. ಅನೀಲ ಸೌದಾಗರ ಮಾತನಾಡಿ, ಸಮಗಾರ (ಚರ್ಮಕಾರ) ಸಮುದಾಯವು ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿದ್ದು, ಸರ್ಕಾರದ ಸೌಲಭ್ಯಗಳು ಇನ್ನಷ್ಟು ಪರಿಣಾಮಕಾರಿಯಾಗಿ ತಲುಪಬೇಕಾಗಿದೆ. ಸಮುದಾಯದ ಪ್ರತಿಯೊಬ್ಬರೂ ಉದ್ಯಮಿಗಳಾಗಿ ಬೆಳೆಯುವ ಉದ್ದೇಶದಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದ ಜಾಗೃತಿ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟಕ್ಕೆ ತರಲಾಗಿದೆ ಎಲ್ಲಾ ಸಮಾಜ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ. ಸುರೇಶ್, ಜ್ಯೋತಿಷಕುಮಾರ ಶರ್ಮಾ, ಮುರುಗೇಶ, ಭೀಮರಾವ್, ಪ್ರಶಾಂತ ಘೋಡಕೆ, ಸತೀಶ ಬಸಗೌಡರ, ಎಸ್.ಪಿ ಮಾಂಗ್, ಸುಂಜಾತ, ಗಜಾನನ ಮಂಗಸೂಳಿ, ಸದಾಶಿವ ಬುಟಾಳಿ. ರಮೇಶ ಸಿಂದಗಿ, ಅಸ್ಲಮ್ ನಾಲಬಂದ, ದಿಲೀಪ ಕಾಂಬಳೆ, ಸುನಿತಾ ಐಹೊಳೆ, ಶಿವಾನಂದ ಸೌದಾಗರ, ರಾಕೇಶ್ ಸೌದಾಗರ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಎಸ್‌ಸಿ-ಎಸ್‌ಟಿ ಹಬ್ ಯೋಜನೆ

ಕಾರ್ಯಕ್ರಮದಲ್ಲಿ ಎಸ್‌ಸಿ-ಎಸ್‌ಟಿ ಹಬ್ ಯೋಜನೆಗಳ ಕುರಿತು ಮಾಹಿತಿ ನೀಡಲಾಗಿದ್ದು, ಉದ್ಯಮ ಆರಂಭಿಸಲು ಅಗತ್ಯವಿರುವ ನೋಂದಣಿ, ಪ್ರಮಾಣಪತ್ರಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಫಲಾನುಭವಿಗಳಿಗೆ ಅರಿವು ಮೂಡಿಸಲಾಯಿತು.

> ಸ್ವಸಹಾಯ ಸಂಘಗಳಿಗೆ 20 ಲಕ್ಷದವರೆಗೆ ಸಾಲ ಸೌಲಭ್ಯ ಲಭ್ಯವಿದ್ದು, ಆತ್ಮನಿರ್ಭರ ಭಾರತ ಸೇರಿದಂತೆ ವಿವಿಧ ಯೋಜನೆಗಳ ಪ್ರಯೋಜನವನ್ನು ಮಹಿಳೆಯರು ಹಾಗೂ ಸಣ್ಣ ಉದ್ಯಮಿಗಳು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.
> -ಸಚಿವ ಸತೀಶ್ ಜಾರಕಿಹೊಳಿ

# ಮುಂಡರಗಿಯಲ್ಲಿ ಮತ್ತೆ ಭುಗಿಲೆದ್ದ ಆತಂಕ

• ಉದಯವಾಹಿನಿ ಯಾದಗಿರಿ:


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮುಂಡರಗಿ ಗ್ರಾಮದಲ್ಲಿ ಇತ್ತೀಚಿನ ಬೆಳವಣಿಗೆಗಳು ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ಸೃಷ್ಟಿಸಿದ್ದು, ಕಾನೂನು ಸುವ್ಯವಸ್ಥೆ ಕುರಿತು ಹಲವು ಪ್ರಶ್ನೆಗಳು ಎದ್ದಿವೆ.

ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಚಂದ್ರಶೇಖರ್ ಭಾವುರು ಅವರ ವಿರುದ್ಧ ಗ್ರಾಮಸ್ಥರು ಗಂಭೀರ ಆರೋಪಗಳನ್ನು ಮಾಡಿದ್ದು, ಗ್ರಾಮದಲ್ಲಿ ಪದೇಪದೇ ಗಲಾಟೆ ಹಾಗೂ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತಿದೆ ಎಂದು ದೂರಿದ್ದಾರೆ. ಗ್ರಾಮಸ್ಥರ ಆರೋಪದ ಪ್ರಕಾರ, ತಾನೊಬ್ಬ ವಕೀಲ ಎಂದು ಜನರ ಮುಂದೆ ಬಿಂಬಿಸಿಕೊಂಡು, ತನ್ನ ಅಣ್ಣ-ತಮ್ಮಂದಿರೊಂದಿಗೆ ಸೇರಿ ಗ್ರಾಮದಲ್ಲಿ ಒಂದಲ್ಲೊಂದು ವಿಚಾರದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇದರಿಂದ ಗ್ರಾಮದಲ್ಲಿ ಸಾಮಾನ್ಯ ಜನರು ಆತಂಕದ ನಡುವೆ ಜೀವನ ನಡೆಸುವಂತಾಗಿದೆ ಎಂದು ಕೆಲ ಗ್ರಾಮಸ್ಥರು ತಿಳಿಸಿದ್ದಾರೆ. ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ತಕ್ಷಣ ಮಧ್ಯಪ್ರವೇಶಿಸಿ, ಯಾವುದೇ ಒತ್ತಡಕ್ಕೆ ಒಳಗಾಗದೆ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.ಗ್ರಾಮಸ್ಥರ ಆರೋಪದಂತೆ, ಚಂದ್ರಶೇಖರ್ ಮುತ್ಯ ಅವರ ವಿರುದ್ಧ ದೂರು ನೀಡಲು ಮುಂದಾದವರು ಹಾಗೂ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾಬಣ್ಣ ಅವರ ಬಳಿ ಇದ್ದ ಕೆಲವರೊಂದಿಗೆ ಚಂದ್ರಶೇಖರ್ ಹಾಗೂ ಅವರ ಕುಟುಂಬದವರು ಜೀವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಈ ಬೆಳವಣಿಗೆಯಿಂದ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ ಎಂದು ಯಂಕಪ್ಪ ಮುಂಡರಗಿ ಅವರು ಪತ್ರಕರ್ತರ ಮುಂದೆ . ಅಳಲನ್ನು ತೋಡಿಕೊಂಡಿದ್ದಾರೆ.ಗ್ರಾಮದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಮಾತನಾಡಲು ಕೆಲವರು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಭಾವ ಹಾಗೂ ಕುಟುಂಬದ ಬೆಂಬಲದಿಂದ ದೂರು ನೀಡಲು ಕೆಲವರು ಹಿಂಜರಿಯುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

# ಜಾಲಾಡಿ-ಹೊಸ್ಕಳಿ ಭಾಗದ ಗದ್ದೆಗಳಲ್ಲಿ ಸಮಸ್ಯೆ

• ಉದಯವಾಹಿನಿ ಕುಂದಾಪುರ-

ಜಾಲಾಡಿ-ಹೊಸ್ಕಳಿ ಭಾಗದ ಗದ್ದೆಗಳಲ್ಲಿ ನೀರು ನಿಂತು ನಾಟಿ ಕಾರ್ಯಕ್ಕೆ ತೊಂದರೆ ಆಗುತ್ತಿರುವ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಾಲಾಡಿ-ಹೊಸ್ಕಳಿ ಭಾಗದ ಜಲಾವೃತವಾದ ಗದ್ದೆಗಳನ್ನು ಜಿಲ್ಲಾಧಿಕಾರಿ ಪರಿಶೀಲಿಸಿದರು.

ಈ ವೇಳೆ ಕುಂದಾಪುರ ತಹಶಿಲ್ದಾರ್ ಪ್ರದೀಪ್ ಕುರ್ಡೇಕರ್, ಕಂದಾಯ ನಿರೀಕ್ಷಕ ರಾಘವೇಂದ್ರ ದೇವಾಡಿಗ, ಗ್ರಾ.ಪಂ ಮಾಜಿ ಸದಸ್ಯ ಸಚ್ಚಿಂದ್ರ ದೇವಾಡಿಗ, ರೈತರಾದ ಜಗನ್ನಾಥ ದೇವಾಡಿಗ, ತೇಜ ದೇವಾಡಿಗ, ದಿನಕರ ದೇವಾಡಿಗ, ರೈತರು ಉಪಸ್ಥಿತರಿದ್ದರು. ಗದ್ದೆಯಲ್ಲಿ ನೀರು ನಿಲ್ಲುವುದರಿಂದ ಇಲ್ಲಿ ಕೃಷಿ ಮಾಡಲು ಅಸಾಧ್ಯ ವಾಗಿದೆ. ಈ ಬಾರಿ ಬೇಸಾಯ ಮಾಡಲು ಆಗುವುದಿಲ್ಲ. ಆದುದರಿಂದ ಮಳೆ ನೀರು ಹರಿದು ಹೋಗಲು ಮೋರಿ ನಿರ್ಮಿಸಬೇಕು ಮತ್ತು ರೈತರಿಗೆ ನಷ್ಟ ಪರಿಹಾರಕ್ಕೆ ಜಿಲ್ಲಾಡಳಿತ ಕ್ರಮಕ್ಕೆಗೊಳ್ಳಬೇಕು ಎಂದು ಸ್ಥಳೀಯ ರೈತರು ಒತ್ತಾಯಿಸಿದರು. ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ, ಜಾಲಾಡಿ-ಹೊಸ್ಕಳಿಯಲ್ಲಿ ಗದ್ದೆಗಳಲ್ಲಿ ನೀರು ನಿಂತಿರುವುದನ್ನು ಪರಿಶೀಲಿಸಲಾಗಿದ್ದು ನಿಂತ ನೀರು ಹರಿದು ಹೋಗಲು ಮೋರಿ ಅಳವಡಿಸಿ, ಕ್ರಮಕ್ಕೆಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಅದಕ್ಕೆ ಸ್ಥಳೀಯಾಡಳಿತ ಎಲ್ಲಾ ರೀತಿಯಿಂದಲೂ ಸಹಕಾರ ನೀಡಲಿದೆ ಎಂದು ತಿಳಿಸಿದರು.

# ಮಳೆಗಾಲದ ಪ್ರವಾಹ ತಡೆಗೆ ಶಾಶ್ವತ ಕ್ರಮ: ಸಚಿವ ಎಂ.ಬಿ. ಪಾಟೀಲ್

• ಉದಯವಾಹಿನಿ ವಿಜಯಪುರ,:

ಮಳೆಗಾಲದಲ್ಲಿ ವಿಜಯಪುರ ನಗರದಲ್ಲಿ ಪ್ರವಾಹ ಉಂಟಾಗದಂತೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಅಗತ್ಯವಿರುವ ಎಲ್ಲಾ ಅನುದಾನವನ್ನು ಒದಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ್ ತಿಳಿಸಿದ್ದಾರೆ.

ನಗರದ ವಿವಿಧೆಡೆ ನಡೆಯುತ್ತಿರುವ ಪ್ರವಾಹ ತಡೆ ಕಾಮಗಾರಿಗಳನ್ನು ಪರಿಶೀಲಿಸಿದ ಸಚಿವರು, ಕಳೆದ ವರ್ಷ ಸುರಿದ ಭಾರಿ ಮಳೆಯಿಂದ ನಗರದ ಹಲವು ಪ್ರದೇಶಗಳಲ್ಲಿ ನೂರಾರು ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರು ಸಂಕಷ್ಟ ಅನುಭವಿಸಿದ್ದರು. ಈ ಹಿನ್ನೆಲೆಯಲ್ಲಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸಮಗ್ರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

**ಶಾಶ್ವತ ಪರಿಹಾರ**

ನಗರದ ಐತಿಹಾಸಿಕ ಕೋಟೆ ಗೋಡೆ ಸುತ್ತಲಿನ ಕಂದಕಗಳಲ್ಲಿ ಹೂಳು ತೆಗೆಯುವ ಹಾಗೂ ಪಿಚಿಂಗ್ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, ಶಿವಾಜಿ ವೃತ್ತದ ಕಂದಕ, ಮನ್ನತ್ ಹಾಲ್ ಸಮೀಪ,ನವಭಾಗ್


ಉದಯವಾಹಿನಿ ಚಿತ್ರ

ರಸ್ತೆ ಹಾಗೂ ಕಸ್ತೂರಿ ಕಾಲೋನಿ ಸೇರಿದಂತೆ ವಿವಿಧ ಪ್ರದೇಶಗಳ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿದರು. ಸದ್ಯದವರೆಗೆ ಪ್ರವಾಹ ತಡೆ ಕಾಮಗಾರಿಗಳಿಗೆ ಸುಮಾರು 6 ಕೋಟಿ ವೆಚ್ಚ ಮಾಡಲಾಗಿದೆ. ಕೆಲವು ಯೋಜನೆಗಳಲ್ಲಿ ಬದಲಾವಣೆ ಮಾಡಿ ಅನುದಾನ ಹೊಂದಾಣಿಕೆ ಮಾಡಲಾಗಿದ್ದು, ಅಗತ್ಯವಿದ್ದರೆ ತಮ್ಮ ಬಬಲೇಶ್ವರ ಕ್ಷೇತ್ರದ ಕೆಲವು ಕಾಮಗಾರಿಗಳ ಅನುದಾನವನ್ನು ಕೂಡ ನಗರ ಪ್ರವಾಹ ತಡೆಗೆ ಬಳಸಲಾಗುವುದು ಎಂದು ಸಚಿವರು ತಿಳಿಸಿದರು.

ನಗರದ ರಸ್ತೆ ಅಭಿವೃದ್ಧಿಗೂ 150 ಕೋಟಿ ಅನುದಾನ ಮಂಜೂರಾಗಿದ್ದು, ಶೀಘ್ರದಲ್ಲೇ ರಸ್ತೆ ಕಾಮಗಾರಿಗಳೂ ಆರಂಭವಾಗಲಿವೆ ಎಂದು ಸಚಿವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ. ಆನಂದ, ಪಾಲಿಕೆ ಆಯುಕ್ತ ವಿಜಯಕುಮಾರ್, ಮೇಯರ್ ಕರಡಿ ಸೇರಿದಂತೆ ಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

> ಇದರ ಜೊತೆಗೆ, ಅಗತ್ಯವಿದ್ದರೆ ಸಿಎಸ್‌ಆರ್ ಅನುದಾನವನ್ನೂ ಬಳಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಎಷ್ಟೇ ಪ್ರಮಾಣದಲ್ಲಿ ಮಳೆಯಾದರೂ ನಗರದಲ್ಲಿ ಪ್ರವಾಹ ಉಂಟಾಗದಂತೆ ಕಂದಕಗಳ ಅಭಿವೃದ್ಧಿ, ಕಾಲುವೆಗಳ ಹೂಳು ತೆರವು ಹಾಗೂ ಇತರೆ ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.
> -ಸಚಿವ ಎಂ.ಬಿ. ಪಾಟೀಲ್

ಪ್ರವಾಹ ತಡೆಗೆ ಕೈಗೊಳ್ಳುತ್ತಿರುವ ಕಾಮಗಾರಿಗಳಿಗೆ ಸ್ಥಳೀಯ ಜನರು ಹಾಗೂ ಪಾಲಿಕೆ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.


# ಒಣ ತ್ಯಾಜ್ಯದಿಂದ ನಿತ್ಯ 120 ಟನ್ ಇದ್ದಿಲು ಉತ್ಪಾದಿಸುವ ಘಟಕ

• ಉದಯವಾಹಿನಿ ಹುಬ್ಬಳ್ಳಿ:

ನಗರದ ಹಳೇ ಗಟ್ಟೂರಿನ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ಅಂಗ ಸಂಸ್ಥೆ, ವಿದ್ಯುತ್ ವ್ಯಾಪಾರ ನಿಗಮ ಲಿ. (ಎನ್‌ವಿವಿಎನ್) ಮಹಾನಗರ ಪಾಲಿಕೆಯ ಒಣ ತ್ಯಾಜ್ಯ ಸಂಸ್ಕರಿಸಿ ಇದ್ದಿಲು ಉತ್ಪಾದಿಸುವ ಘಟಕಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭೇಟಿ ನೀಡಿ, ವೀಕ್ಷಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಬ್ಬಳ್ಳಿ – ಧಾರವಾಡ ಅವಳಿನಗರ ಬೆಳೆದಂತೆ ಕಸದ ಸಮಸ್ಯೆಯೂ ಹೆಚ್ಚುತ್ತಿದೆ. ಕಸಮುಕ್ತ ನಗರವಾಗಿಸುವ ನಿಟ್ಟಿನಲ್ಲಿ 'ಕಸದಿಂದ ಇಂಧನ' ಯೋಜನೆ ಅಡಿ 157 ಕೋಟಿ ವೆಚ್ಚದಲ್ಲಿ ಒಣ ತ್ಯಾಜ್ಯದಿಂದ ಇದ್ದಿಲು ಉತ್ಪಾದಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದ್ದು. ಪ್ರಾಯೋಗಿಕ ಕಾರ್ಯ ಯಶಸ್ವಿಯಾಗಿದೆ' ಎಂದರು.

ಈ ಯೋಜನೆಯನ್ನು ಕೇಂದ್ರ ಸರ್ಕಾರವು ವಾರಾಣಸಿಯಲ್ಲಿ ಮೊದಲ ಬಾರಿಗೆ ಜಾರಿಗೆ ತಂದಿದ್ದು, ಹುಬ್ಬಳ್ಳಿಯು 2ನೇ ನಗರ. ಇಲ್ಲಿನ ಘಟಕವು ಪ್ರತಿ ದಿನ


ಉದಯವಾಹಿನಿ ಚಿತ್ರ

200 ಟನ್ ಒಣ ತ್ಯಾಜ್ಯವನ್ನು 120 ಟನ್ ಇದ್ದಿಲು ಆಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. ಕಳೆದ 72 ಗಂಟೆಗಳಲ್ಲಿ ಸುಮಾರು 250 ಟನ್ ಒಣ ತ್ಯಾಜ್ಯದಿಂದ ಇದ್ದಿಲು ಉತ್ಪಾದಿಸಲಾಗಿದೆ.

ಈ ಘಟಕವು 2027ರ ಜನವರಿಗೆ ಸಂಪೂರ್ಣವಾಗಿ ಕಾರ್ಯ ನಿರ್ವಹಿಸಲಿದೆ' ಎಂದು ಹೇಳಿದರು.'ಅವಳಿ ನಗರದಲ್ಲಿ ಸಂಗ್ರಹಿಸಿದ ಒಣ ತ್ಯಾಜ್ಯವನ್ನು ಈ ಘಟಕಕ್ಕೆ ಮಹಾನಗರ ಪಾಲಿಕೆ ಉಚಿತವಾಗಿ ನೀಡುತ್ತಿದೆ. ಒಣ ತ್ಯಾಜ್ಯದಿಂದ ಉತ್ಪಾದನೆ ಆಗುವ ಇದ್ದಿಲನ್ನು ಕಲ್ಲಿದ್ದಲು ಉತ್ಪಾದಿಸುವ ಕೈಗಾರಿಕೆಗಳಿಗೆ ರವಾನಿಸಲಾಗುತ್ತದೆ. ಸುಮಾರು 8 ಎಕರೆ ಪ್ರದೇಶದಲ್ಲಿ ಎರಡು ಘಟಕಗಳು ಕಾರ್ಯ ನಿರ್ವಹಿಸುತ್ತವೆ. ಒಂದು ಘಟಕ ಹಾಳಾದರೂ ಮತ್ತೊಂದು ಘಟಕ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ' ಎಂದು ತಿಳಿಸಿದರು.

'ಇದ್ದಿಲು ಉತ್ಪಾದನೆಗೆ ಶೇ 20ರಷ್ಟು ವಿದ್ಯುತ್ ಬಳಕೆ ಮಾಡಲಾಗುತ್ತದೆ. ಉಳಿದ ಶಕ್ತಿಯನ್ನು ತ್ಯಾಜ್ಯ ಸಂಸ್ಕರಿಸುವ ಪ್ರಕ್ರಿಯೆಯಲ್ಲಿ ಉಂಟಾಗುವ ಗ್ಯಾಸ್‌ನಿಂದ ಕಾರ್ಯ ನಡೆಯಲಿದೆ. ವಿದ್ಯುತ್ ವ್ಯಾಪಾರ ನಿಗಮವು ಪ್ರತಿ ವರ್ಷ 11 ಕೋಟಿ ವೆಚ್ಚ ನಿರ್ವಹಣೆಗೆ ಬಳಸಲಿದೆ. ಈ ಘಟಕಗಳಿಂದ ಸುಮಾರು 200ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ದಕ್ಷಿಣ ಭಾರತದ ಮೊದಲ ಘಟಕ ರಾಜ್ಯದಲ್ಲಿ ಕಾರ್ಯಾರಂಭ ಮಾಡಲಿದೆ' ಎಂದು ತಿಳಿಸಿದರು.

ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಉಪ ಮೇಯರ್ ಸಂತೋಷ ಚವ್ಹಾಣ, ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಉಪ ಆಯುಕ್ತ ವಿಜಯಕುಮಾರ್ ಸೇರಿದಂತೆ ಅಧಿಕಾರಿಗಳು ಇದ್ದರು.

# ಶೈಕ್ಷಣಿಕ ಬೆಳವಣಿಗೆಯಲ್ಲಿ ಶಿಕ್ಷಣ ಇಲಾಖೆ ಕಾರ್ಯ ಮಹತ್ವದ್ದು

• ಉದಯವಾಹಿನಿ ಭಾಲ್ಕಿ


ಉದಯವಾಹಿನಿ ಚಿತ್ರ

ಶೈಕ್ಷಣಿಕ ಬೆಳವಣಿಗೆಯಲ್ಲಿ ಶಿಕ್ಷಣ ಇಲಾಖೆಯ ಕಾರ್ಯ ಮಹತ್ವದ್ದಾಗಿದೆ ಎಂದು ಗ್ರಾಮೀಣಾಭಿವೃದ್ಧಿ, ಪಂಚಾಯತ ರಾಜ್ ಹಾಗು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಸಚಿವರ ನಿವಾಸ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ತಾಲ್ಲೂಕು ಘಟಕದ ವತಿಯಿಂದ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಣಮಂತ ಕಾರಾಮುಂಗೆ ನೇತೃತ್ವದಲ್ಲಿ ನೀಡಲಾದ ಮನವಿ ಪತ್ರ ಸ್ವೀಕರಿಸಿ ಅವರು ಮಾತನಾಡಿದರು. ರಾಜ್ಯದ ಶೈಕ್ಷಣಿಕ ಬೆಳವಣಿಗೆಗೆ ಶಿಕ್ಷಣ ಇಲಾಖೆ ಮಹತ್ವದ ಕಾರ್ಯನಿರ್ವಹಿಸುತ್ತಲಿದೆ. ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಲಿರುವ ನೌಕರರು ಮತ್ತು ಶಿಕ್ಷಕರು ಸದಾ ಮಕ್ಕಳ ಏಳ್ಗೆಗಾಗಿ ದುಡಿಯುವ ಕಾರ್ಯಮಾಡಬೇಕು ಎಂದರು. ತಾಲ್ಲೂಕು ಮಟ್ಟದಲ್ಲಿ ಗುರುಭವನ ನಿರ್ಮಾಣಕ್ಕಾಗಿ ಶಿಕ್ಷಣ ಇಲಾಖೆ ನೌಕರರು ಮನವಿ ಸಲ್ಲಿಸಿದ್ದು, ಆದಷ್ಟು ಬೇಗ ಗುರುಭವನ ನಿರ್ಮಾಣ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು. ಇದೇವೇಳೆ ಸಚಿವರು ಮೂರನೆ ಸಲ ರಾಜ್ಯದಲ್ಲಿ ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕಾರಣ ಶಾಲಾ ಶಿಕ್ಷಣ ಇಲಾಖೆಯ ನೌಕರರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ರಾಜಕಾಲುವೆ ಮೇಲೆ ಕಟ್ಟಡ ಕುಸಿತ, ಹಲವು ಮಕ್ಕಳಿಗೆ ಗಾಯ

## ನಾಯಕ ಅರಸರ ಕಾಲದಲ್ಲೇ ಕೋಟೆನಗರಿ ವೈಜ್ಞಾನಿಕ ರೀತಿಯ ಕಾಲುವೆಗಳಿಗೆ ಹೆಸರಾಗಿತ್ತು

• ಉದಯವಾಹಿನಿ ಚಿತ್ರದುರ್ಗ:

ರಾಜಕಾಲುವೆ ಮೇಲೆ ನಿರ್ಮಿಸಿದ್ದ ಕ್ರೆಸೆಂಟ್ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ವೇದಿಕೆ ಕುಸಿದು ಹಲವು ಮಕ್ಕಳು ಗಾಯಗೊಂಡಿದ್ದಾರೆ. ಇದರಿಂದ ಪಾಲಕರು ಭೀತಿಗೆ ಒಳಗಾಗಿದ್ದಾರೆ. ಆದರೆ, ನಗರದ ಬಹುತೇಕ ಕಡೆಗಳಲ್ಲಿ ರಾಜಕಾಲುವೆ ಮೇಲೆಯೇ ಶಾಲೆ, ಮನೆ, ವಾಣಿಜ್ಯ ಮಳಿಗೆ ನಿರ್ಮಾಣಗೊಂಡಿದ್ದು ಇವೂ ಕುಸಿದರೆ


**1 : ಮಳೆ ಬಂದರೂ ಚರಂಡಿ ನೀರು ರಸ್ತೆಗೆ**
**2 : ರಾಜಕಾಲುವೆಯನ್ನೇ ಆವರಿಸಿಕೊಂಡಿವೆ**
**3 : ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು**

ಸುರಕ್ಷತೆ ಹೇಗೆ? ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಸೃಷ್ಟಿಯಾಗಿದೆ. ನಗರದ ಉಮರ್ ವೃತ್ತದಲ್ಲಿರುವ ಕ್ರೆಸೆಂಟ್ ಶಾಲೆಯ ವಿದ್ಯಾರ್ಥಿಗಳು ಜೂನ್ 25ರಂದು ಬೆಳಿಗ್ಗೆಯ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇದಕ್ಕಿದ್ದಂತೆಯೇ ವೇದಿಕೆ ಕುಸಿದ ಪರಿಣಾಮ ಇದರಿಂದ 6 ವಿದ್ಯಾರ್ಥಿಗಳು ಗಾಯಗೊಂಡರು.

ಘಟನೆಯ ನಂತರ ತೀವ್ರ ಆಘಾತಕ್ಕೊಳಗಾದ ಪಾಲಕರು ಶಾಲಾ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಶಾಲೆಯ ವೇದಿಕೆಯ ಒಂದು ಭಾಗ ರಾಜಕಾಲುವೆ ಮೇಲೆ ನಿರ್ಮಾಣಗೊಂಡಿರುವುದು ಪತ್ತೆಯಾಗಿದ್ದು, ಅಕ್ರಮ ಭಾಗವನ್ನು ತೆರವುಗೊಳಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು. ನಾಯಕ ಅರಸರ ಕಾಲದಲ್ಲೇ ಕೋಟೆನಗರಿ ವೈಜ್ಞಾನಿಕ ರೀತಿಯ ಕಾಲುವೆಗಳಿಗೆ ಹೆಸರಾಗಿತ್ತು. ಈ ಕಾಲುವೆಗಳಲ್ಲಿ ಕುಡಿಯುವ ನೀರು ಹರಿಯುತ್ತಿತ್ತು. ಈಗಲೂ ಈ ಕಾಲುವೆಗಳು ಜೀವಂತವಾಗಿದ್ದು ರಾಜಕಾಲುವೆಯ ರೂಪ ಪಡೆದಿವೆ. ರಾಜಕಾಲುವೆಗಳನ್ನು ಹಲವರು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಿದ್ದಾರೆ. ನಗರಸಭೆ ಇಂತಹ ಒತ್ತುವರಿಗಳನ್ನು ತೆರವು ಮಾಡುವುದನ್ನು ಬಿಟ್ಟು ಅಕ್ರಮ ಒತ್ತುವರಿಯನ್ನು ಸಕ್ರಮ ಮಾಡುತ್ತಿದೆ. ಖಾತೆ ಮಾಡಿ ನೋಂದಣಿಯನ್ನೂ ಮಾಡಿಕೊಟ್ಟಿದೆ ಎಂದು ಅವರು ದೂರಿದ್ದಾರೆ. ಕನಕ ವೃತ್ತದ ಭಾಗದಿಂದ ಆರಂಭಗೊಳ್ಳುವ ರಾಜಕಾಲುವೆ ಮುಂದೆ ಸಾಗುತ್ತಾ ಅತ್ಯಂತ ಕಿರಿದಾಗುತ್ತದೆ. ಮುಂದೆ ಅಂತ್ಯಗೊಳ್ಳುವ ವೇಳೆಗೆ ಚರಂಡಿಯೇ ಮಾಯವಾಗಿದೆ. ಈ ಮಾರ್ಗಗಳಲ್ಲಿ ಸ್ವಲ್ಪ ಜೋರು ಮಳೆ ಬಂದರೂ ಚರಂಡಿ ನೀರು ರಸ್ತೆಗೆ ಹರಿಯುತ್ತದೆ.

**ಮ್ಯಾನ್ ಹೋಲ್‌ಗಳು ಕಸದಿಂದ ಕಟ್ಟಿಕೊಂಡಿದೆ**

ಮ್ಯಾನ್ ಹೋಲ್‌ಗಳು ಕಸದಿಂದ ಕಟ್ಟಿಕೊಂಡು ರಸ್ತೆಯೇ ಚರಂಡಿಯ ರೂಪ ಪಡೆದುಕೊಳ್ಳುತ್ತವೆ. ಈ ಮಾರ್ಗದಲ್ಲಿ ನಾಲ್ಕೈದು ಖಾಸಗಿ ಶಾಲೆಗಳಿದ್ದು ರಾಜಕಾಲುವೆಯನ್ನೇ ಆವರಿಸಿಕೊಂಡಿವೆ. 'ನಗರದಲ್ಲಿ 10 ಕಡೆಗಳಲ್ಲಿ ರಾಜಕಾಲುವೆ ಹರಿಯುತ್ತದೆ. ಅವುಗಳ ನಕ್ಷೆಯೂ ಇದೆ. ಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿ ಹಲವು ವರ್ಷ ಕಳೆದರೂ ನಗರಸಭೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಇಲ್ಲಿರುವ ಬಹುತೇಕ ವಾಣಿಜ್ಯ ಮಳಿಗೆಗಳು ರಾಜಕಾಲುವೆ ಮೇಲೆಯೇ ನಿರ್ಮಾಣಗೊಂಡಿವೆ. ಲಕ್ಷ್ಮಿ ಬಜಾರ್‌ನಲ್ಲಿರುವ ಬೃಹತ್ ಬಟ್ಟೆ ಅಂಗಡಿಗಳು, ನರ್ಸಿಂಗ್ ಹೋಂಗಳು, ಶೋರೂಂಗಳು, ಸಣ್ಣ ಪುಟ್ಟ ಅಂಗಡಿಗಳು ರಾಜಕಾಲುವೆ ಮೇಲೆಯೇ ನಿರ್ಮಾಣಗೊಂಡಿವೆ. ಮಳೆ ಬಂದಾಗ ಗಾಂಧಿ ವೃತ್ತದ ಹಲವು ಮಳಿಗೆಗಳಿಗೆ ನೀರು ನುಗ್ಗುತ್ತದೆ. ಬಿ.ಡಿ. ರಸ್ತೆಯಲ್ಲಿರುವ ಕೃಷ್ಣ ಬೇಕರಿ, ಪೈ ಶೋರೂಂ, ಕಾಂತಿ ಸ್ವೀಟ್ಸ್ ಸಮೀಪದ ಹಲವು ಮಳಿಗೆಗಳು ಮಳೆ ಬಂದರೆ ಜಲಾವೃತವಾಗುತ್ತವೆ. ಭಾರಿ ಮಳೆ ಬಂದರೆ ಗಾಂಧಿ ವೃತ್ತ ಕೆರೆಯಂತಾಗಿ ವಾಹನಗಳ ಸಂಚಾರ ಸಂಪೂರ್ಣವಾಗಿ ಬಂದ್ ಆಗುತ್ತದೆ. ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಮಳೆ ನೀರಿನಲ್ಲಿ ಮುಳುಗಿ ಮಳಿಗೆಗಳ ವರ್ತಕರು ಕಣ್ಣೀರು ಹಾಕುತ್ತಾರೆ. ಇಷ್ಟಾದರೂ ನಗರಸಭೆ ಅಧಿಕಾರಿಗಳು ಇವರ ಸಮಸ್ಯೆ ಸರಿಪಡಿಸುವ ಕೆಲಸ ಮಾಡಿಲ್ಲ ಎಂದು ಅವರು ಆರೋಪಿಸುತ್ತಾರೆ.





ಉದಯವಾಹಿನಿ ಚಿತ್ರ

> 'ರಾಜಕಾಲುವೆಯ ಸಮೀಕ್ಷೆ ಮಾಡಿಸಿ ಒತ್ತುವರಿಯನ್ನು ಪತ್ತೆ ಹಚ್ಚಲಾಗುವುದು. ಕ್ರೆಸೆಂಟ್ ಶಾಲೆ ಸೇರಿದಂತೆ ಯಾವುದೇ ಕಟ್ಟಡ ರಾಜ ಕಾಲುವೆ ಮೇಲೆ ಕಟ್ಟಿದ್ದರೆ ಆ ಬಗ್ಗೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.
> - ಪೌರಾಯುಕ್ತ ಎಸ್.ಲಕ್ಷ್ಮಿ

> ಕ್ರೆಸೆಂಟ್ ಶಾಲೆಗೆ ಬಿಇಒ ಭೇಟಿ ನೀಡಿ ಪರಿಶೀಲಿಸಿ ವಿದ್ಯಾರ್ಥಿಗಳ ಸುರಕ್ಷತೆ ಮೇಲೆ ನಿಗಾ ವಹಿಸಿದ್ದಾರೆ. ವಿದ್ಯಾರ್ಥಿಗಳ ಪ್ರಾಣಕ್ಕೆ ಹಾನಿಯಾಗಿಲ್ಲ. ರಾಜಕಾಲುವೆ ಮೇಲೆ ಶಾಲೆಯ ವೇದಿಕೆ ಇದ್ದ ಕಾರಣ ಘಟನೆ ನಡೆದಿದೆ.
> -ಎಂ.ಆರ್.ಮಂಜುನಾಥ್, ಡಿಡಿಪಿಐ

**ಗಣ್ಯವ್ಯಕ್ತಿಗಳ ಪ್ರಭಾವಕ್ಕೆ ಮಣಿದಿರುವ ನಗರಸಭೆ**

'ರಾಜಕಾಲುವೆ ಮೇಲಿರುವ ಬಹುತೇಕ ಕಟ್ಟಡಗಳು ನಗರದ ಗಣ್ಯವ್ಯಕ್ತಿಗಳಿಗೆ ಸೇರಿವೆ. ಅವರ ಪ್ರಭಾವಕ್ಕೆ ಮಣಿದಿರುವ ನಗರಸಭೆ ಅಧಿಕಾರಿಗಳು ಕಾಲುವೆಯನ್ನೂ ಸೇರಿಸಿ ಖಾತೆ ಮಾಡಿಕೊಟ್ಟಿದ್ದಾರೆ. ಹೀಗಾಗಿ ಅವರ ಕಟ್ಟಡಗಳನ್ನು ಮುಟ್ಟಲು ಅಧಿಕಾರಿಗಳು ಭಯಪಡುತ್ತಾರೆ' ಎಂದು ಸ್ಥಳೀಯರು ಆರೋಪಿಸುತ್ತಾರೆ.

# ಮಿನಿ ನ್ಯೂಸ್

## ವಿದ್ಯುತ್ ತಗುಲಿ ಸಾವನ್ನಪ್ಪಿದ ಬಸಪ್ಪ ಪೂಜಾರಿ

• ಉದಯವಾಹಿನಿ ಅಫಜಲಪುರ:

ವಿದ್ಯುತ್ ತಂತಿ ಜೋಡಿಸಲು ಲೈನ್ ಮ್ಯಾನ್ ತನ್ನ ಬದಲಿಗೆ ರೈತ ಬಸಪ್ಪ ಪೂಜಾರಿ (42) ಎನ್ನುವವರನ್ನು ವಿದ್ಯುತ್ ಕಂಬಕ್ಕೆ ಏರಿಸಿದಾಗ ತಂತಿ ಸ್ಪರ್ಶಿಸಿ ವಿದ್ಯುತ್ ತಗುಲಿ ದಾರುಣವಾಗಿ ರೈತ ಮೃತಪಟ್ಟಿರುವ ದುರ್ಘಟನೆ ಬೆಳಗಿನ ಜಾವ ಸಂಭವಿಸಿದೆ.

ತಾಲ್ಲೂಕಿನ ಅಳ್ಳಗಿ(ಕೆ) ಗ್ರಾಮದ ರೈತ ಬಸಪ್ಪ ಪೂಜಾರಿ ಎನ್ನುವವರನ್ನು ಲೈನ್ ಮ್ಯಾನ್ ಗುಂಡೋಜಿ ಚೌವ್ಹಾಣ್ ಎನ್ನುವವರು ಕರೆದುಕೊಂಡು ಹೋಗಿ ವಿದ್ಯುತ್ ತಂತಿ ಕಡಿತಗೊಂಡಿದೆ. ನನಗೆ ಕಂಬ ಇರಲು ಆಗುವುದಿಲ್ಲ, ಈಗ ಎಲ್.ಸಿ ತೆಗೆದುಕೊಂಡಿದ್ದೇನೆ ನೀನೇ ಕಂಬ ಏರಿ ವಿದ್ಯುತ್ ತಂತಿ ಸರಿಪಡಿಸು ಎಂದಾಕ್ಷಣ ವಿದ್ಯುತ್ ಕಂಬ ಏರಿದ ರೈತ ಬಸಪ್ಪ ಪೂಜಾರಿ ಇವರು ವಿದ್ಯುತ್ ತಂತಿ ಸ್ಪರ್ಶಿಸಿದಾಗ ಭೀಕರವಾಗಿ ವಿದ್ಯುತ್ ತಗುಲಿದೆ.

ತಕ್ಷಣವೇ ಅಫಜಲಪುರ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದ್ರು ಕೂಡ ಕೊನೆಗೂ ರೈತ ಮೃತಪಟ್ಟಿದ್ದಾರೆ.ಈ ಘಟನೆ ಸಂಭವಿಸುತ್ತಿದ್ದಂತೆ ಪ್ರಗತಿಪರ ರೈತ ಸಂಘಟನೆಗಳು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ್ ಹೂಗಾರ ಮಾತನಾಡಿ, ವಿದ್ಯುತ್ ಅವಘಡದಲ್ಲಿ ಮೃತಪಟ್ಟ ಬಸಪ್ಪ ಪೂಜಾರಿ ಕುಟುಂಬಕ್ಕೆ 50 ಲಕ್ಷ ರೂ.ಪರಿಹಾರ ನೀಡುವುದರ ಜತೆಗೆ ಸರ್ಕಾರದಿಂದ ಮಕ್ಕಳಿಗೆ ನೆರವು ಆಗುವಂತೆ ಸೌಲಭ್ಯಗಳನ್ನು ಒದಗಿಸಬೇಕು,ರಾಜ್ಯ ಸರ್ಕಾರ ರೈತರನ್ನು ನಿರಂತರವಾಗಿ ಕಡೆಗಣನೆ ಮಾಡುತ್ತಿದೆ ಎಂದು ದೂರಿದ್ದರು.

## ಅಪರಾಧಿಗಳು ಎಲ್ಲೆಡೆ ಇದ್ದಾರೆ

• ಉದಯವಾಹಿನಿ ಮಂಗಳೂರು :

ಬಾಲಕಿಯ ಆತ್ಮಹತ್ಯೆಗೆ ಕಾರಣನಾದ ಆರೋಪಿ ಗಂಜಿಮಠ ಮೂಲದ ಮನೀಶ್ ಪೂಜಾರಿ ಎಂಬಾತನನ್ನು ಘಟನೆ ನಡೆದ ದಿನದಂದೇ ಬಂಧಿಸಲಾಗಿದೆ ಎಂದು ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಡಿಎನ್‌ಎ ಪುರಾವೆಗಳಿವೆ. ಇದು ಶಿಕ್ಷೆಗೆ ಕಾರಣವಾಗುತ್ತದೆ. ಪೊಲೀಸರು ತನಿಖೆಯನ್ನು ಮುಂದುವರಿಸುತ್ತಿದ್ದಾರೆ. ಈ ಮಧ್ಯೆ ಕೆಲವು ವಿಭಾಗಗಳು ಬಾಲಕಿಯ ನ್ಯಾಯಕ್ಕಾಗಿ ಧ್ವನಿ ಎತ್ತುತ್ತಿವೆ. ಇಲ್ಲಿ ಅಪರಾಧ ಪ್ರಕರಣಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದರಲ್ಲಿ ಮೂಲಭೂತ ವಿರೋಧಾಭಾಸಗಳಿವೆ. ಆರೋಪಿ ಇನ್ನೊಂದು ಸಮುದಾಯಕ್ಕೆ ಸೇರಿದವನಾಗಿದ್ದಾಗ ನ್ಯಾಯಕ್ಕಾಗಿ ಬೇಗನೆ ಒತ್ತಾಯಿಸಲಾಗುತ್ತದೆ. ಆರೋಪಿ ಸ್ವಸಮುದಾಯದ ವ್ಯಕ್ತಿ ಆದಾಗ ಮೌನ ವಹಿಸುವುದು ಯಾತಕ್ಕೆ? ಈ ಆಕ್ರೋಶಗಳು ಬಲಿಪಶುಗಳ ನಿಜವಾದ ರಕ್ಷಣೆಗಿಂತ ಕೋಮು ಸೂಕ್ಷ್ಮತೆಯನ್ನು ತೋರಿಸುತ್ತದೆ. ನಾವು ನಿಜವಾಗಿಯೂ ನ್ಯಾಯಕ್ಕಾಗಿ ಬದ್ಧರಾಗಿದ್ದರೆ ಎಲ್ಲಾ ಆರೋಪಿಗಳನ್ನು ಒಂದೇ ಮಾನದಂಡದಲ್ಲಿ ನೋಡಬೇಕು. ಅಪರಾಧವು ಸಾರ್ವತ್ರಿಕ ಸಮಸ್ಯೆಯಾಗಿದೆ. ಅಪರಾಧಿಗಳು ಎಲ್ಲೆಡೆ ಇದ್ದಾರೆ ಎಂಬ ವಾಸ್ತವದಿಂದ ಯಾವ ಸಮುದಾಯ ಕೂಡ ಹೊರತಾಗಿಲ್ಲ ಎಂದು ಸುಧೀರ್ ಕುಮಾರ್ ರೆಡ್ಡಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ರಾಮ ಮಂದಿರದಲ್ಲಿ ಅವ್ಯವಹಾರದಂತಹ ಘೋರ ಅಪಚಾರ ನಡೆಯಬಾರದಿತ್ತು

• ಉದಯವಾಹಿನಿ ಉಡುಪಿ


ಉದಯವಾಹಿನಿ ಚಿತ್ರ

ದೇಶ ವಿದೇಶದ ಸಮಸ್ತ ಶ್ರದ್ಧಾಳುಗಳ ಕೇಂದ್ರವಾಗಿ ರುವ ರಾಮ ಮಂದಿರದಲ್ಲಿ ಅವ್ಯವಹಾರದಂತಹ ಘೋರ ಅಪಚಾರ ನಡೆಯಬಾರದಿತ್ತು. ನಡೆದದ್ದು ಸತ್ಯವಾದರೆ ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಬೇಕು. ರಾಜ್ಯ ಸರಕಾರದ ಮೇಲೆ ವಿಶ್ವಾಸ ಇದೆ. ಸರಿಯಾಗಿ ತನಿಖೆ ನಡೆಯುವ ವಿಶ್ವಾಸ ಇದೆ. ಆ ಮೂಲಕ ಸತ್ಯಾಸತ್ಯತೆ ಶೀಘ್ರವಾಗಿ ಹೊರಬರಬೇಕು ಎಂದು ರಾಮಮಂದಿರ ವಿಶ್ವಸ್ತಮಂಡಳಿ ಟ್ರಸ್ಟ್ ಸದಸ್ಯರಾದ ಪೇಜಾವರ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದ್ದಾರೆ. ಉಡುಪಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎಸ್‌ಐಟಿ ತನಿಖೆ ನಡೆಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು.

ನಾನು ಹೋದಾಗಲೆಲ್ಲ ಕೆಲವು ಸಲಹೆ ನೀಡುತ್ತಿದ್ದೇನೆ. ಸಭೆಗಳಲ್ಲೂ ಕೂಡ ಪ್ರಸ್ತಾಪ ಮಾಡುತ್ತಿರುತ್ತೇನೆ. ಎಲ್ಲವನ್ನು ಮಾಡುತ್ತಿದ್ದೇವೆ ಎಂದು ಅವರು ಹೇಳಿದ್ದರು. ನಾನು ಅಲ್ಲೇ ನಿಲ್ಲಲು ಸಾಧ್ಯವಿಲ್ಲ ಹೋದಾಗ ಪರಿಶೀಲಿಸಿ ಸಲಹೆ ನೀಡಿ ಬರುತ್ತಿದ್ದೇನೆ. ನಾನು ವಿಶ್ವಸ್ಥ ಮಂಡಳಿ ಸದಸ್ಯನಾಗಿ ಅವರ ಮೇಲೆ ವಿಶ್ವಾಸ ಇಟ್ಟು ಸಲಹೆ ಕೊಡುತ್ತ ಬರುತ್ತಿದ್ದೇನೆ. ವಿಶ್ವಸ್ಥ ಮಂಡಳಿ ಆಗಿರುವುದರಿಂದ ಸಂಬಂಧಪಟ್ಟವರು ವಿಶ್ವಾಸಾರ್ಹ ವ್ಯಕ್ತಿಗಳಾಗಿರಬೇಕಿತ್ತು ಎಂದು ಅವರು ತಿಳಿಸಿದರು.

## ಇಂದು ಪೋಲಿಯೋ ಲಸಿಕಾ ಅಭಿಯಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ ಯಲಬುರ್ಗಾ

ಪಲ್ಸ್ ಪೋಲಿಯೋ ಲಸಿಕಾ ದಿನದ ಅಂಗವಾಗಿ ಜೂನ್ 28 ರಿಂದ ಜುಲೈ 1 ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ಲಸಿಕಾ ಅಭಿಯಾನ ಕುರಿತು ಶಾಲಾ ಮಕ್ಕಳಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲ್ಲೂಕಿನ ಮುಧೋಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ. ಹಮ್ಮಿಕೊಂಡಿದ್ದ ಸರಕಾರಿ ಶಾಲಾ ಮಕ್ಕಳಿಂದ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಂಡಿದ್ದರು. ಜೀವದ ರಕ್ಷಾ ಕವಚವಾದ ಎರಡು ಹನಿ ಪಲ್ಸ್ ಪೋಲಿಯೋವನ್ನು ನವಜಾತ ಶಿಶುವನ್ನು ಒಳಗೊಂಡಂತೆ 5 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಹಾಕಿಸುವಂತೆ ಸಾರ್ವಜನಿಕರಲ್ಲಿ ಈ ಜಾಥಾ ಕಾರ್ಯಕ್ರಮದ ಮೂಲಕ ವಿನಂತಿಸಲಾಗಿದೆ.

ಈ ಸಂದರ್ಭ ಆರೋಗ್ಯ ಇಲಾಖೆಯ ವೈದ್ಯರು/ ಸಿಬ್ಬಂದಿಗಳು, ಗುರುಸಿದ್ದನಗೌಡರ್. ಅಂಜುಮ್ ಬೇಗಂ. ಸರಕಾರಿ ಶಾಲಾ ಮುಖ್ಯ ಶಿಕ್ಷಕರು ರೇಣುಕಾ ಬಾಗಲಿ. ಇನ್ನೊರ್ವ ಮುಖ್ಯ ಶಿಕ್ಷಕರು ಶಿವಶಂಕ್ರಪ್ಪ ಕೆಂಪಣ್ಣವರ. ಬಸಪ್ಪ ದಗಲಿ. ಇನ್ನೊರ್ವ ಶಿಕ್ಷಕರು ಇದ್ದರು. ಆರೋಗ್ಯ ಇಲಾಖೆ ಸಿಂಬಂದಿಗಳಾದ. ಆಶಾ ಕಾರ್ಯಕರ್ತರು ದೇವಕ್ಕ. ಮೀನಾಕ್ಷಿ. ಅಕ್ಕಮ್ಮ. ಸುನಂದಾ. ಶಕುಂತಲಾ. ಶೋಭಾ. ಶಾಂತ. ಮತ್ತು ಸರಕಾರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಭಾಗಿಯಾಗಿದ್ದರು.



